೧೯೦

ಶಿಕ್ಷಣ ಮತ್ತು ಸಂಸ್ಕೃತಿ

ಆಯ್. ಎಸ್. ಬಿದರಿ
ಬಿ.ಎ; ಎಂ.ಇಡಿ., ಡಿ.ಪಿ.ಇಡಿ; ಡಿ.ಬಿ.ಇ.

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಅಗಸ್ಟ, ೧೯೭೪

ಉಪನ್ಯಾಸ ಗ್ರಂಥಮಾಲೆ

೧೯೦

ಶಿಕ್ಷಣ ಮತ್ತು ಸಂಸ್ಕೃತಿ

ಆಯ್. ಎಸ್. ಬಿದರಿ

ಬಿ.ಎ; ಎಂ.ಇಡಿ., ಡಿ.ಪಿ.ಇಡಿ; ಡಿ.ಬಿ.ಇ.

ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ

ಅಗಸ್ಟ, ೧೯೭೪

ಪ್ರಕಾಶಕರು:

ಎಸ್. ಎಸ್. ಒಡೆಯರ, ಎಂ. ಎ., ಎಲ್‌ಎಲ್. ಬಿ.
ಕುಲಸಚಿವರು,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ : ಅಗಸ್ಟ, ೧೯೭೪
೫,೦೦೦ ಪ್ರತಿಗಳು

ಬೆಲೆ : ೨೫ ಪೈಸೆ

ಮುದ್ರಕರು:
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ
ಧಾರವಾಡ–೩

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ವ್ಯಾಸಂಗ ವಿಸ್ತರಣ ಹಾಗೂ ಪ್ರಕಟನ ಶಾಖೆಯ ಮುಖಾಂತರ ಕೈಕೊಂಡು ನಡೆ ಸುತ್ತಿರುವ ಜ್ಞಾನ ಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರು ರುವದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ಎಂಟು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರ ಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧ ಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲ ಯದ ಜ್ಞಾನ ಭಂಡಾರದ ಅಲ್ಪಾಂಶವನ್ನಾದರೂ ಮಹಾ ಜನರ ಮನೆಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸ ಮಾಲೆ ಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿ ಕೊಳ್ಳುತ್ತಿರುವದು ನಿಜವಾಗಿಯೂ ಸಂತೋಷದ ಸಂಗತಿ ಯಾಗಿದೆ.

ಈ ಜ್ಞಾನ ಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೧೮೯ ಪುಸ್ತಕಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ನಾಲ್ಕು-ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ, ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಎಂ. ಜಯಲಕ್ಷಮ್ಮಣ್ಣಿ
ಕುಲಪತಿ

ದಿ. ೧೦-೮-೧೯೭೪

ಅರಿಕೆ

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ವಿಭಾಗದವರು ಈ ವರ್ಷದ ಜನವರಿ ತಿಂಗಳಿನ ೫ ಹಾಗೂ ೬ನೆಯ ದಿನಾಂಕ ನಿಸರ್ಗದೇವಿಯ ತೂಗುತೊಟ್ಟಿಲಾದ ದಾಂಡೇಲಿಯಲ್ಲಿ ೧೭೭ ನೇ ಉಪನ್ಯಾಸ ಶಿಬಿರವನ್ನೇರ್ಪಡಿಸಿ ಆ ಶಿಬಿರದ ಕೊನೆಯ ದಿನ (೬-೧-೧೯೭೪) "ಶಿಕ್ಷಣ ಮತ್ತು ಸಂಸ್ಕೃತಿ" ಎಂಬ ವಿಷಯದ ಮೇಲೆ ಉಪನ್ಯಾಸವೀಯಲು ನನಗೆ ಅನುವು ಮಾಡಿಕೊಟ್ಟರು. ನಮ್ಮ ನಾಡಿನ ಹೆಮ್ಮೆಯ ನಿರ್ಝರಿಣಿಯೊಂದಾದ ಕಾಳೀ ನದಿಯ ತಟಾಕ; ಸುತ್ತಲೂ ಹಸಿರು ದುಕೂಲವನ್ನುಟ್ಟು, ಮಂಗಲಮಯ ಮುತ್ತೈದೆಯಂತೆ ಕಂಗೊಳಿಸುತ್ತಿರುವ ಪ್ರಕೃತಿದೇವಿ. ಈ ನಿಸರ್ಗಮಾತೆಯ ಮುದ್ದುಗೂಸಾಗಿ ಬೆಳೆದು ಬಂದ ದಾಂಡೇಲಿಯು ಇಂದು ಔದ್ಯಮಿಕ ನಗರವಾಗಿಯೂ ಬೆಳೆಯುತ್ತಿದೆ. ಇಂತಹ ಸನ್ನಿವೇಶದಲ್ಲಿ ಸುಸಂಸ್ಕೃತ ಸ್ನೇಹಿತರೊಂದಿಗೆ ಕಳೆದ ರಸನಿಮಿಷಗಳನ್ನು ಮರೆಯಲಾರೆ.

ಅಂದು ಅಲ್ಲಿ ಮಾಡಿದ ಉಪನ್ಯಾಸವನ್ನು ಕೇಂದ್ರೀಕರಿಸಿ ಆದರ ವಿಷಯವನ್ನು ಅವಶ್ಯವೆನಿಸಿದಲ್ಲಿ ವಿಸ್ತರಿಸಿ, ಮಾರ್ಪಡಿಸಿ, ಈ ಕಿರುಹೊತ್ತಿಗೆಯನ್ನು ರಚಿಸಲಾಗಿದೆ.

ಪಾಶ್ಚಾತ್ಯ ಸಂಸ್ಕೃತಿಯ ಸೆಳವಿಗೆ ಸಿಕ್ಕು ನಮ್ಮ ಆದರ್ಶ ಪರಂಪರೆಯನ್ನೂ, ಸಂಸ್ಕೃತಿಯನ್ನೂ, ನಿಯಮ-ನಿಬಂಧನೆಗಳನ್ನೂ, ವಿಶಾಲ ಮನೋಭಾವನೆಯನ್ನೂ ಮರೆತು, ಭೌತಿಕತೆಯ ಬೆನ್ನು ಹತ್ತಿ, ಮೃಗಜಲದತ್ತ ಧಾವಿಸುತ್ತಿರುವ ಇಂದಿನ ನಮ್ಮ ಜನಾಂಗಕ್ಕೆ ನಿಜವಾದ ಸುಖವೂ, ಸಮೃದ್ಧಿಯುತ ಜೀವನವೂ, ಶಾಂತಿ-ಸಮಾಧಾನ-ಸಂತೃಪ್ತಿಗಳೂ ಲಭಿಸಬೇಕಾಗಿವೆ. ಸಮಾಜದ ವಿವಿಧ ವರ್ಗಗಳಲ್ಲಿ ಕಂಡು ಬರುವ ಅಸಮಾನತೆ, ಅಸಮಾಧಾನಗಳು ಕಳಚಿಹೋಗಬೇಕಾಗಿದೆ.

ಇಂಥ ಶಾಂತಿಯುತ, ಸಮೃದ್ಧಿಯುತ, ಆಧ್ಯಾತ್ಮಿಕತೆಯ ಸಹಜೀವನಕ್ಕೆ ಶಿಕ್ಷಣವೇ ಪ್ರಾಮುಖ್ಯವಾದ ಸಾಧನವಾಗಿದೆ. ಇಂತಹ ಶಿಕ್ಷಣಕ್ಕೆ ಸಂಸ್ಕೃತಿವಂತರೇ ಮೂಲಾಧಾರ. ಅದರಂತೆ ಸಂಸ್ಕೃತಿವಂತರನ್ನು ನಿರ್ಮಿಸುವುದು ಶಿಕ್ಷಣದ ಧ್ಯೇಯ. ಈ ಎಲ್ಲ ವಿಷಯವು ಸೂಚ್ಯವಾಗಿ, ಸ್ಥಳಾವಕಾಶಕ್ಕೆ ಒಳಪಟ್ಟು 'ಕರಿಯು ಕನ್ನಡಿಯಲ್ಲಿ ಅಡಗಿದಂತೆ' ಈ ಪುಸ್ತಿಕೆಯಲ್ಲಿ ಕಾಣಿಸಿಕೊಂಡಿದೆಯೆಂದು ಭಾವಿಸುತ್ತೇನೆ. ಸಂಸ್ಕೃತಿ, ಸಮೃದ್ಧಿ, ಸಂತೃಪ್ತಿ, ಶಾಂತಿಯನ್ನು ಸ್ಥಾಪಿಸಬಲ್ಲ ಸುಯೋಗ್ಯ ಹಾಗೂ ಕ್ರಿಯಾಶೀಲ ಶಿಕ್ಷಣವನ್ನು ರೂಪಿಸುವುದು ಅತ್ಯವಶ್ಯವೆಂದು ತಜ್ಞರು ಅರಿತು ಆಲೋಚಿಸುತ್ತಿರುವುದು ಆನಂದದ ಸಂಗತಿಯೇ ಸರಿ.

'ಶಿಕ್ಷಣ ಮತ್ತು ಸಂಸ್ಕೃತಿ'ಯ ಬಗೆಗೆ ನನ್ನ ಉಪನ್ಯಾಸವನ್ನೇರ್ಪಡಿಸಿ ಹಾಗೂ ಈ ಪುಸ್ತಿಕೆಯನ್ನು ಪ್ರಕಟಿಸಿ ನನ್ನ

ಮೇಲೆ ಮಹದುಪಕಾರವನ್ನು ಮಾಡಿದ ಕರ್ನಾಟಕ ವಿಶ್ವ ವಿದ್ಯಾಲಯದ ಎಲ್ಲ ಅಧಿಕಾರಿಗಳ, ವಿಶೇಷವಾಗಿ ಪ್ರಕಟನ ಶಾಖೆಯ ನಿರ್ದೇಶಕರಾದ ಶ್ರೀ ಚೆನ್ನವೀರ ಕಣವಿ ಹಾಗೂ ಸಹಾಯಕ ನಿರ್ದೇಶಕರಾದ ಶ್ರೀ ಲಿಂಗರಾಜ ಗುಡ್ಡೀನ ಅವರಿಗೆ ನಾನು ಚಿರಋಣಿಯಾಗಿರುವೆ. ಈ ಹೊತ್ತಿಗೆಯ ಹಸ್ತ ಪ್ರತಿಯನ್ನು ತಯಾರಿಸುವಲ್ಲಿ ಸೂಕ್ತ ಸಲಹೆಗಳನ್ನಿತ್ತು ಮಾರ್ಗ ದರ್ಶನ ಮಾಡಿದ ಕರ್ನಾಟಕ ವಿಶ್ವವಿದ್ಯಾಲಯದ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯರಾದ ಶ್ರೀ ಸಿ.ಎಸ್. ಬೆನ್ನೂರ ಅವರಿಗೆ ನನ್ನ ಅನಂತ ಕೃತಜ್ಞತೆಗಳು.

ಅಲ್ಪಾವಧಿಯಲ್ಲಿಯೇ ಅಂದವಾಗಿ ಮುದ್ರಿಸಿದ ವಿಶ್ವ ವಿದ್ಯಾಲಯದ ಮುದ್ರಣಾಲಯದವರಿಗೆ ಉಪಕೃತನಾಗಿರುವೆ.

'ಪಿತೃಛಾಯಾ'
ಧಾರವಾಡ
೧೦-೮-೧೯೭೪

ಆಯ್. ಎಸ್. ಬಿದರಿ

ಪರಿವಿಡಿ

೧. ಶಿಕ್ಷಣ: ವ್ಯಾಪ್ತಿ ಹಾಗೂ ಉದ್ದೇಶ

ಶಿಕ್ಷಣವು ವಿಶ್ವದ ಉಸಿರು, ಸಕಲ ಸುಧಾರಣೆಗಳ ಅಡಿಗಲ್ಲು; ಸುಖ-ಸಂಪತ್ತಿನ ಮೂಲ ಮಂತ್ರ. ಮಾನವನನ್ನು ಪೂರ್ಣ ಮಾನವನನ್ನಾಗಿ, ಅದೇಕೆ, ದೇವ ಮಾನವನನ್ನಾಗಿ ಮಾಡುವ ಪವಿತ್ರ ಸಾಧನ. ವಿಶ್ವದಲ್ಲಿಯ ಅನೇಕ ಪ್ರಾಣಿಗಳನ್ನು ತನ್ನ ಅಂಕಿತದಲ್ಲಿಟ್ಟುಕೊಂಡು ತನ್ನ ಅಭ್ಯುದಯಕ್ಕೆ ಅವುಗಳನ್ನು ಉಪಯೋಗಿಸಿಕೊಳ್ಳುವ ಸಾಮರ್ಥ್ಯವನ್ನು ಮಾನವನು ಪಡೆದುದು ವಿದ್ಯೆಯ ಬಲದಿಂದ. ಅದರಂತೆ ನಿಸರ್ಗ ಸಂಪತ್ತನ್ನು ಸಹ ತನ್ನ ಅಭಿವೃದ್ಧಿಗೆ ತಕ್ಕಂತೆ ಬಳಸುತ್ತ ಬಂದುದು ಶಿಕ್ಷಣದ ಬಲದಿಂದಲೇ ಸರಿ. ಮಗುವಿನಲ್ಲಿ ಹುದುಗಿರುವ ಅಂತಃ ಶಕ್ತಿಗಳನ್ನು ಹೊರದೆಗೆದು ಅವುಗಳನ್ನು ವಿಕಸಿಸಿ ಉದಾತ್ತೀಕರಿಸುವುದು ಶಿಕ್ಷಣವೆಂದು ಶಿಕ್ಷಣ ತಜ್ಞರ ಅಭಿಪ್ರಾಯ. ಪ್ರಸಿದ್ಧ ಶಿಕ್ಷಣ ತಜ್ಞರೂ, ಕೇಂದ್ರ ಸರಕಾರದಲ್ಲಿ ಶಿಕ್ಷಣ ಸಲಹೆಗಾರರೂ ಆಗಿದ್ದ ದಿ. ಕೆ. ಜಿ. ಸಯಾದೀನ ಅವರು "ಮಕ್ಕಳಲ್ಲಿ ಹಾಗೂ ಪ್ರೌಢರಲ್ಲಿ ತಾವು ವಾಸಿಸುವ ಇಂದಿನ ಜಗತ್ತಿನ ಹಾಗೂ ಮುಂದೆ ವಾಸಿಸಲಿರುವ ನಾಳಿನ ಜಗತ್ತಿನ ನಿಜವಾದ ಅರಿವನ್ನು ಹಾಗೂ ಹೊಣೆಗಾರಿಕೆಯನ್ನು ಹುಟ್ಟಿಸುವುದು ಶಿಕ್ಷಣದ ಕರ್ತವ್ಯ"ವೆಂದು ಹೇಳಿದ್ದಾರೆ.

ಶಿಕ್ಷಣವೆಂದರೆ ಕೇವಲ ವಿವಿಧ ವಿಷಯಗಳನ್ನು ಬೋಧಿಸುವುದಲ್ಲ. ಅದು ಒಂದು ಸುಸಂಬದ್ಧವಾದ ಶಾಸ್ತ್ರ; ಸಾಮಾಜಿಕ ಪರಿಸ್ಥಿತಿ. ಶಿಕ್ಷಣವು ಜನರ ವ್ಯಕ್ತಿತ್ವವನ್ನು ಅರಳಿಸಿ ಅವರನ್ನು ಅತ್ಯುಚ್ಚ ಸ್ಥಾನಕ್ಕೆ ಒಯ್ಯಲು ಹವಣಿಸುತ್ತದೆ. ವಿದ್ಯಾರ್ಥಿಗಳನ್ನು ಸಚ್ಚಾರಿತ್ರ್ಯವುಳ್ಳವರನ್ನಾಗಿ ಮಾಡುವುದು; ಜನರ ಆಚಾರವಿಚಾರಗಳನ್ನು ಶುಚಿಗೊಳಿಸುವುದು; ಅವರು ಸಾಮಾಜಿಕ ಹೊಣೆಗಾರಿಕೆಗಳನ್ನು ಸರಿಯಾಗಿ ಜರುಗಿಸುವಂತೆ ಮಾಡುವುದು; ಒಟ್ಟಿನಲ್ಲಿ, ಎಲ್ಲರೂ ಯೋಗ್ಯ ನಾಗರಿಕರಾಗಿ ಬಾಳುವಂತೆ ಮಾಡುವ ತಾರಕವೇ ಶಿಕ್ಷಣ. ಹೀಗೆ ಶಿಕ್ಷಣವು ಮಾನುಷ್ಯ ಜೀವನದ ಸಂಜೀವಿನಿಯಾಗಿದೆ.

ಶಿಕ್ಷಣವನ್ನು ಸೂರ್ಯ, ಚಂದ್ರ, ಸಮುದ್ರ ಮತ್ತು ವನಶ್ರೀಗೆ ಹೋಲಿಸಬಹುದು. ಸೂರ್ಯನು ಇಡೀ ವಿಶ್ವಕ್ಕೆ ಪ್ರಕಾಶವನ್ನೂ, ತೇಜಸ್ಸನ್ನೂ ಕೊಟ್ಟು ಸಚರಾಚರಗಳ ಅಭಿವೃದ್ಧಿಗೆ ಕಾರಣನಾಗಿರುವಂತೆ ಶಿಕ್ಷಣವು ಮಾನವರಿಗೆ ಜ್ಞಾನದ ಬೆಳಕನ್ನು ನೀಡಿ ಅವರನ್ನು ತೇಜೋವಂತರನ್ನಾಗಿ ಮಾಡಿ ಅವರ ಹಾಗೂ ವಿಶ್ವದ ಅಭಿವೃದ್ಧಿಯನ್ನು ಸಾಧಿಸಬಲ್ಲುದು. ಚಂದ್ರನ ಪ್ರಕಾಶವು ಭೂಮಿಯ ಮೇಲಿನ ಪಶು-ಪಕ್ಷಿಗಳಿಗೂ, ಜನರಿಗೂ ಆಹ್ಲಾದವನ್ನೀಯುವಂತೆ ಶಿಕ್ಷಣವು ಶಾಂತಿ, ಸಮಾಧಾನ, ಸಂತೋಷ, ಸಮೃದ್ಧಿಯನ್ನು ನೀಡುವ ಸಾಧನವಾಗಿದೆ. ಸಮುದ್ರವು ಗಂಭೀರವೂ ವಿಶಾಲವೂ ಆಗಿರುವಂತೆ ಶಿಕ್ಷಣವೇತ್ತ ವ್ಯಕ್ತಿಯು ಹೊರಗೆ ಗಂಭೀರ ಸ್ವರೂಪದವನಂತೆ ಇದ್ದು ವಿಶಾಲ

ಹೃದಯಿಯೂ ಪರೋಪಕಾರ ಬುದ್ಧಿಯುಳ್ಳವನೂ ಆಗಿರುತ್ತಾನೆ ವನಶ್ರೀಯು ತನ್ನ ರಮ್ಯತೆಯಿಂದ ಸೊಬಗನ್ನೀಯುವಳಲ್ಲದೆ ಸಮುದ್ರದಿಂದ ಉದ್ಭವಿಸಿದ ಮೇಘಗಳನ್ನು ತಡೆದು, ತಂಪನ್ನೆರಚಿ ಮಳೆಯನ್ನು ತರುವಳು; ಭೂದೇವಿಯನ್ನು ತಣಿಸುವಳು, ಹಲವಾರು ಬೆಳೆಗಳ ಬೆಳೆಗೆ ಕಾರಣಳಾಗುವಳು; ಧವಸ-ಧಾನ್ಯಗಳಿಂದ ಭೂಮಿಯನ್ನು ತುಂಬಿಸಿ ಜನರನ್ನೂ ಪಶು–ಪಕ್ಷಿಗಳನ್ನೂ ಸಲಹುವಳು. ಆದರಂತೆ ಶಿಕ್ಷಣವಾದರೂ ವಿಶ್ವಕ್ಕೆ ಸಮಷ್ಟಿಯನ್ನು ಒದಗಿಸಿ ಸಕಲ ಜೀವಿಗಳ ಬಾಳನ್ನು ಸಮೃದ್ಧಿಗೊಳಿಸುವುದು.

ಹೀಗಿರುವ ಶಿಕ್ಷಣದ ಧ್ಯೇಯಗಳು ಹಲವಾರು ವಿಧವಾಗಿವೆ. ಮನುಷ್ಯರಿಗೆ ಜೀವಿಸಲು ಅವಶ್ಯವಿರುವ ಆಹಾರವನ್ನು ಒದಗಿಸುವುದು ಶಿಕ್ಷಣದ ಒಂದು ಧ್ಯೇಯವೆಂದು ಹೇಳಬಹುದು. ಆದರೆ ಇದು ತೀರ ಸಂಕುಚಿತ ಧ್ಯೇಯವಾಗುವುದು. ಯಾಕಂದರೆ ಶಿಕ್ಷಣ ಹೊಂದದ ಮನುಷ್ಯನು ತನಗೆ ಹಾಗೂ ತನ್ನನ್ನು ಅವಲಂಬಿಸಿದವರಿಗೆ ಬೇಕಾಗುವಷ್ಟು ಆಹಾರವನ್ನು ದೊರಕಿಸುವುದಿಲ್ಲವೇ ? ಅಲ್ಲದೆ ಹೊಟ್ಟೆ ಹೊರೆದುಕೊಳ್ಳುವುದೊಂದೇ ಮನುಷ್ಯನ ಬದುಕಿನ ಧ್ಯೇಯವಲ್ಲ. ತನ್ನ ಬಾಳನ್ನೂ, ನೆರೆಹೊರೆಯವರ ಬದುಕನ್ನೂ ಹಸನಾಗಿಸಿ, ಉಜ್ವಲಗೊಳಿಸಿ ತನ್ಮೂಲಕ ತನ್ನ ನಾಡು, ನುಡಿ, ದೇಶ–ಆದೇಕೆ ಇಡೀ ಮಾನವ ಕುಲವನ್ನೇ ಸುಖ-ಸಮಾಧಾನ–ಸಂತೃಪ್ತಿಯತ್ತ ಒಯ್ಯುವದು. ಮಾನವನ ಬದುಕಿನ ಧ್ಯೇಯವಾಗಿದೆ. ಇಂಥ ಧ್ಯೇಯ ಸಾಧನೆಗೆ

ಶಿಕ್ಷಣವು ಅತ್ಯವಶ್ಯ. ಇದರಂತೆ ಸುಖಸಮಯವಾದ ಸಮೃದ್ಧಿಯುತವಾದ, ಪ್ರಗತಿಪರ ಜೀವನವನ್ನು ಸಾಗಿಸುವುದು ಶಿಕ್ಷಣದ ಇನ್ನೊಂದು ವಿಧವಾದ ಧ್ಯೇಯ. ಇಂಥ ಧ್ಯೇಯ ಸಾಧನೆಗಾಗಿ ಅದು ವ್ಯಕ್ತಿಯನ್ನು ಸಜ್ಜುಗೊಳಿಸಬೇಕಾಗುವುದು. ಇದೇ ತೆರನಾಗಿ ತಾನೂ ಜೀವಿಸಬೇಕು. ಇತರರೂ ಜೀವಿಸಬೇಕು. ಎಂಬ ಮನೋವೃತ್ತಿಯನ್ನು ಮಾನವರಲ್ಲಿ ತಂದು ಕೊಡುವುದು ಶಿಕ್ಷಣದ ಇನ್ನೊಂದು ಧ್ಯೇಯವಾಗಿದೆ. ಸುತ್ತಲಿನ ಪರಿಸರಕ್ಕೆ ವ್ಯಕ್ತಿಯು ಹೊಂದಿಕೊಳ್ಳಬೇಕು, ಅದೇಕೆ, ಪರಿಸರವನ್ನು ಮಾರ್ಪಡಿಸಿ ಅದನ್ನೂ ಸಮಾಜವನ್ನೂ ಉನ್ನತ ಸ್ಥಿತಿಗೆ ಒಯ್ಯುವಂತೆ ಆ ವ್ಯಕ್ತಿಯು ಶಕ್ತಿಯನ್ನು ಪಡೆಯಬೇಕು. ಇಂತಹ ಶಕ್ತಿ ಸಾಮರ್ಥ್ಯವನ್ನು ವ್ಯಕ್ತಿಯಲ್ಲಿ ತಂದುಕೊಡುವದು ಶಿಕ್ಷಣದ ಇನ್ನೊಂದು ಧ್ಯೇಯವಾಗಿದೆ. ನಯವಾದ ಬದುಕಿಗೆ ಐದು ಸಂಗತಿಗಳು ಅವಶ್ಯ. ಆಹಾರ, ಅರಿವೆ ಆಶ್ರಯ, ಆರೋಗ್ಯ, ಅರಿವು ಇವೇ ಆ ಐದು ಆವಶ್ಯಕತೆಗಳು. ಮಹಾತ್ಮಾ ಗಾಂಧೀಜಿಯವರಿಂದ ಹೊರಹೊಮ್ಮಿದ ಜೀವನ ಶಿಕ್ಷಣದ ಧ್ಯೇಯವು ಇದುವೇ ಆಗಿದೆ. ಈ ಐದು 'ಅ'ಗಳನ್ನು (ಅವಶ್ಯಕತೆಗಳನ್ನು) ಸ್ವಂತ ಪರಿಶ್ರಮದಿಂದ, ಸಾಧುಮಾರ್ಗದಿಂದ ಸಂಪಾದಿಸಬೇಕೆಂದು ಜೀವನ ಶಿಕ್ಷಣವು ಹೇಳುತ್ತದೆ. ಅದುವೇ ಮುಂದೆ ಸಾಗಿ ವ್ಯಕ್ತಿಯು ಸಂಪೂರ್ಣನಾಗಬೇಕು, ಸ್ವಾವಲಂಬಿಯಾಗಬೇಕು, ಸದಭಿಮಾನಿಯಾಗಬೇಕು, ಸ್ವದೇಶ ಪ್ರೇಮಿಯಾಗಬೇಕೆಂದು ಸಾರುತ್ತದೆ. ದುಡಿಮೆ, ನೀತಿ, ಸತ್ಯ, ಪ್ರಾಮಾಣಿಕತನ, ತ್ಯಾಗ, ಸ್ನೇಹ, ಸಹಕಾರಗಳಂತಹ

ಲೋಕೋತ್ತರ ಗುಣಗಳನ್ನು ವ್ಯಕ್ತಿಗಳಲ್ಲಿ ಉಂಟು ಮಾಡಬೇಕು; ಇದು ಶಿಕ್ಷಣದ ಧ್ಯೇಯ.

ಒಟ್ಟನಲ್ಲಿ ಶಿಕ್ಷಣವು ಮನುಷ್ಯನನ್ನು ಸ್ವಾವಲಂಬಿಯನ್ನಾಗಿ, ಸ್ವಯಂಪೂರ್ಣನನ್ನಾಗಿ, ಸ್ನೇಹಪರನನ್ನಾಗಿ, ತ್ಯಾಗ ಮನೋಭಾವವುಳ್ಳವನನ್ನಾಗಿ, ನೀತಿವಂತನನ್ನಾಗಿ, ಸಹಕಾರಿಯನ್ನಾಗಿ, ರಾಷ್ಟ್ರೀಯ ವೃತ್ತಿಯುಳ್ಳವನನ್ನಾಗಿ, ವಿಶ್ವ ಪ್ರೇಮಿಯನ್ನಾಗಿ, ಅಹಿಂಸಾಪರನನ್ನಾಗಿ, ಸತ್ಯಸಂಧನನ್ನಾಗಿ, ಹೊಂದಾಣಿಕೆಯುಳ್ಳವನನ್ನಾಗಿ, ಪವಿತ್ರ ಜೀವಿಯನ್ನಾಗಿ ಮಾಡುವ ಸದುದ್ದೇಶದಿಂದ ಕೂಡಿರಬೇಕು. ಈ ಉದ್ದೇಶಗಳಿಂದ ಕೂಡಿದುದೇ ನಿಜವಾದ ಶಿಕ್ಷಣ.

ಮೇಲ್ಕಾಣಿಸಿದ ಧ್ಯೇಯ-ಧೋರಣೆಗಳು ಈಡೇರಬೇಕಾದರೆ ಇಂದಿನ ಶಿಕ್ಷಣ ಪದ್ಧತಿಯಲ್ಲಿ ಅಧಿಕ ಬದಲಾವಣೆಯು ಅವಶ್ಯವಿದೆ. ಬಿಡುವಿಲ್ಲದ ಜೀವನ, ವಿಜ್ಞಾನದ ನಾಗಾಲೋಟ, ಬೆಳೆಯುತ್ತಿರುವ ಜನಸಂಖ್ಯೆ, ವಿದೇಶಗಳ ಹೆಚ್ಚಿನ ಸಂಪರ್ಕ, ಜನಮನದಲ್ಲಿ ಆದ ಬದಲಾವಣೆ, ಆರ್ಥಿಕ ವಿಷಮತೆ, ನಿರುದ್ಯೋಗ-ಇವೇ ಮೊದಲಾದ ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡು ಶಿಕ್ಷಣ ಕ್ರಮವನ್ನು ರೂಪಿಸುವುದು ಅವಶ್ಯವಿದೆ. ಇಂದಿನ ಪುಸ್ತಕೀಯ ವಿದ್ಯೆಯು ಉತ್ಪಾದಕ ವೃತ್ತಿ ಒಲವಿನದಾಗಬೇಕು; ದೇಶದ ಸಾಂಪತ್ತಿಕ ಸ್ಥಿತಿಯು ಬೆಳೆದು ಬರಬೇಕಾದರೆ ವ್ಯಕ್ತಿಗಳು ಉದ್ಯೋಗಶೀಲರಾಗಬೇಕು. ಕಾರಣ ವಿವಿಧ ಕಸಬುಗಳು, ಉದ್ಯೋಗಗಳು, ಕೈಗಾರಿಕೆಗಳು ಶಾಲೆಯ

ಲ್ಲಿಯೇ ಪ್ರಾರಂಭವಾಗುವದು ಅವಶ್ಯವಿದೆ. ಮಕ್ಕಳ ದೇಹ ಮತ್ತು ಮನಸ್ಸುಗಳೆರಡೂ ಏಕಕಾಲದಲ್ಲಿಯೇ ಶಿಕ್ಷಣ ಹೊಂದಬೇಕು ಅರ್ಥಾತ್ ದೈಹಿಕ ಶ್ರಮ ಉತ್ಪಾದಕ, ಉಪಯುಕ್ತ ವೃತ್ತಿಗಳಲ್ಲಿ ಪರ್ಯವಸಾನಗೊಂಡು ಮಾನಸಿಕ ಹಾಗೂ ಬೌದ್ಧಿಕ ಬೆಳವಣಿಗೆಗೆ ಆಸ್ಪದವೀಯಬೇಕು. ಇದಾಗಬೇಕಾದರೆ ಶಿಕ್ಷಣದ ಅನೇಕ ಸಾಧನಗಳನ್ನು ಯೋಗ್ಯ ದಿಶೆಯಲ್ಲಿ ಬಳಸಬೇಕು. ಆ ಸಾಧನಗಳಾವುವು ಎಂಬುದನ್ನು ಮುಂದೆ ವಿವರಿಸಲಾಗುವುದು.

೨. ಶಿಕ್ಷಣದ ಸಾಧನಗಳು

ಪ್ರಾಚೀನ ಕಾಲದಲ್ಲಿ ಶಿಕ್ಷಣವು ಗುರುವಿನ ಮುಖದಿಂದ ಮಾತ್ರ ನಡೆಯುತ್ತಿದ್ದುದರಿಂದ ಶಿಕ್ಷಣದ ಏಕಮೇವ ಸಾಧನವು 'ಗುರು'ವಾಗಿದ್ದನು. ಆದರೆ ಇಂದು ಕಾಲ ಬದಲಾಗಿದೆ. ಇಂದು ಯಂತ್ರಗಳ, ಹಾಗೂ ಹಲವಾರು ಶೋಧನೆಗಳ ಕಾರಣದಿಂದ, ವಿಜ್ಞಾನದ ಪ್ರಾಬಲ್ಯದಿಂದ ಜೀವನವು ಕ್ಲಿಷ್ಟವಾಗಿದೆ. 'ಗುರು'ವು ಏಕ ಮಾತ್ರ ಶಿಕ್ಷಣ ದಾತೃವೆಂಬ ಅಭಿದಾನವನ್ನು ಬಹು ಮಟ್ಟಿಗೆ ಕಳೆಚಿಕೊಂಡಿದ್ದಾನೆ. ಗುರುವಿನ ಜೊತೆಗೆ ಶಿಕ್ಷಣ ವೀಯುವ ಕೆಲವು ಮಹತ್ವದ ಸಾಧನಗಳನ್ನು ಇಂದು ನಾವು ನೋಡುತ್ತಿದ್ದೇವೆ. ಶಿಕ್ಷಣದ ಸಾಧನಗಳನ್ನಾಗಿ ನಾವು ಅವು ಗಳನ್ನು ಬಳಸುತ್ತಿದ್ದೇವೆ; ಬಳಸಲೇಬೇಕು.

ಶಿಕ್ಷಣದ ಪ್ರಪ್ರಥಮ ಸಾಧನವೆಂದರೆ ಮನೆ. ತಾಯಿಯ ಗರ್ಭದಿಂದ ಭೂಮಿಗೆ ಬಂದ ಮಗುವು ತಾಯಿ-ತಂದೆಯಿಂದ ಪಾಲನೆ-ಪೋಷಣೆಯನ್ನು ಪಡೆಯುತ್ತದೆ; ಶೈಶವದಲ್ಲಿ ಅವರ ಹಾಗೂ ಅಣ್ಣಂದಿರ, ಅಕ್ಕಂದಿರ ಮನೆಯಲ್ಲಿರುವ ಇತರ ಹಿರಿಯರ ಮಾತು, ಆಚಾರ, ವಿಚಾರ, ನಡೆವಳಿಕೆ ಮೊದಲಾ

ದುವನ್ನು ಕೇಳುತ್ತದೆ, ನೋಡುತ್ತದೆ. ಅನುಕರಣ ಪ್ರವೃತ್ತಿಯನ್ನು ಸಹಜವಾಗಿಯೇ ಪಡೆದು ಬಂದ ಅದು, ಹಿರಿಯರು ಆದರ್ಶವೆಂದು ತಿಳಿದು ಅವರ ರೀತಿ-ನೀತಿಗಳನ್ನು ಅವ್ಯಕ್ತವಾಗಿ, ಅಪ್ರತ್ಯಕ್ಷವಾಗಿ ಅರಗಿಸಿಕೊಳ್ಳುತ್ತದೆ. ಹಿರಿಯರಾದವರು ಇದನ್ನು ಅರಿತು ಮಗುವಿನೆದುರಿನಲ್ಲಿ ಎಚ್ಚರಿಕೆಯಿಂದ ವರ್ತಿಸಬೇಕು. ತಮ್ಮ ನಡೆವಳಿಕೆಯು ಚೆನ್ನಾಗಿರುವಂತೆ ಜಾಗ್ರತೆ ವಹಿಸಬೇಕು; ಮಗುವನ್ನು ಪ್ರೀತಿ-ವಾತ್ಸಲ್ಯದಿಂದ ಕಾಣಬೇಕು; ಒಳ್ಳೆಯ ಮಾತುಗಳನ್ನು ಆಡಬೇಕು; ಸ್ವಚ್ಛತೆ, ಅಚ್ಚು-ಕಟ್ಟುತನಗಳತ್ತ ಲಕ್ಷ್ಯ ಪೂರೈಸಬೇಕು. ಮಗುವಿಗೆ ಒಳ್ಳೆಯ ಕಥೆಗಳನ್ನು ಹೇಳಬೇಕು. ಮನೆಯ ಪರಿಸರವನ್ನು ಚೆನ್ನಾಗಿಡಬೇಕು. ಒಳ್ಳೆಯ ವಾತಾವರಣದಲ್ಲಿ ಬೆಳೆದ ಮಗುವು ಒಳ್ಳೆಯ ಗುಣಗಳಿಂದ ಕೂಡುವದು ಸ್ವಾಭಾವಿಕ. ಈ ದೃಷ್ಟಿಯಿಂದ 'ಮನೆಯೇ ಮೊದಲ ಪಾಠ ಶಾಲೆ, ತಾಯಿಯೇ ಮೊದಲಾದ ಹಿರಿಯರು ಮೊದಲ ಗುರುಗಳು' ಎಂದು ಹೇಳಿದುದು ಯಥಾಯೋಗ್ಯವಾಗಿದೆ.

ಶಾಲೆಯು ಶಿಕ್ಷಣದ ದ್ವಿತೀಯ ಸಾಧನವಾಗಿದೆ. ತಾಯಿ ತಂದೆ ಹಾಗೂ ಮನೆಯ ಇತರ ಬಂಧು-ಭಗಿನಿಯರಿಂದ ವಾತ್ಸಲ್ಯವನ್ನು ಪಡೆದ ಮಗುವು ಶಾಲೆಯಲ್ಲಿಯೂ ಅದೇ ಪ್ರೀತಿ, ಮಮತೆಯನ್ನು ಕಾಣುವ ಸದಿಚ್ಛೆಯಿಂದ ಬರುತ್ತಾನೆ. ಕಾರಣ ಶಿಕ್ಷಕ ಶಿಕ್ಷಿಕೆಯರು ಮಕ್ಕಳನ್ನು ಮಮತೆಯಿಂದ ಕಾಣಬೇಕು. ಅಂದರೆ ಮಾತ್ರ ತಾವು ಮಾಡತಕ್ಕ ಕೆಲಸದಲ್ಲಿ

ಅರ್ಥ ಯಶಸ್ಸು ಅವರಿಗೆ ಲಭಿಸಿದಂತಾಗುವುದು. ಶಾಲೆಯು ಆವಾರವು ಹಾಗೂ ವರ್ಗದ ಕೋಣೆಗಳು ಸ್ವಚ್ಛವಾಗಿರಬೇಕು; ಪ್ರತಿ ಕೋಣೆಯಲ್ಲಿ ರಾಷ್ಟ್ರ ಪುರುಷರ, ಐತಿಹಾಸಿಕ ವ್ಯಕ್ತಿಗಳ ಭಾವಚಿತ್ರಗಳಿರಬೇಕು. ಆಯಾ ವರ್ಗದ ಅಭ್ಯಾಸ ಪತ್ರಿಕೆಯಲ್ಲಿ ಇರುವಂತೆ ವಿಷಯಕ್ಕೆ ಸಂಬಂಧಿಸಿದ ಕಲಿಸುವ ಸಾಧನ-ಸಲಕರಣೆಗಳ (Teaching Aids) ಚಿತ್ರಗಳು ಇಲ್ಲವೆ ಪಟಗಳಿರಬೇಕು. ಶಾಲೆಯ ಮುಂಭಾಗದಲ್ಲಿ ಹೂದೋಟವಿದ್ದು ಬಣ್ಣ ಬಣ್ಣದ ಹೂಗಳಿಂದ ಆ ತೋಟವು ಕೂಡಿರಬೇಕು; ಶಾಲೆಯ ಹಿಂಬದಿಯಲ್ಲಿ ಇಲ್ಲವೆ ಒಂದು ಮಗ್ಗಲಲ್ಲಿ ವಿಶಾಲವಾದ ಆಟದ ಬಯಲು ಇದ್ದು ವಿವಿಧ ಆಟಗಳ ಕ್ಷೇತ್ರವನ್ನು ಗುರುತಿಸಿರಬೇಕು. ಚಿಕ್ಕ ಮಕ್ಕಳ ಸಲುವಾಗಿ ಜೋಕಾಲಿ ಮೊದಲಾದ ಸಾಧನಗಳಿರಬೇಕು. ಶಾಲೆಯಲ್ಲಿ ವಕ್ತೃತ್ವ ಸಂಘ, ನಾಟ್ಯ ಸಂಘ ಮೊದಲಾದ ಸಂಘಗಳಿದ್ದು ಅವು ತಮ್ಮವೇ ಆದ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿರಬೇಕು. ಶಾಲೆಯ ಗುರುಗಳು ತಮ್ಮ ವಿದ್ವತ್ತು, ಆಚಾರ, ವಿಚಾರ, ಮಾತು, ರೀತಿಗಳಲ್ಲಿ ಆದರ್ಶ ವ್ಯಕ್ತಿಗಳಾಗಿರಬೇಕು. ಶಾಲೆಯು ಸಜೀವ ಶಾಲೆಯೆನ್ನಿಸಿಕೊಳ್ಳಬೇಕಾದರೆ ಅಲ್ಲಿಯ ಶಿಕ್ಷಕರು ಜೀವಕಳೆಯಿಂದ ತುಂಬಿದವರಾಗಿರಬೇಕು. ಅಂದರೆ ಅವರು ಚಟುವಟಿಕೆಯುಳ್ಳವರೂ, ಕರ್ತವ್ಯ ದಕ್ಷರೂ, ಮಕ್ಕಳನ್ನು ಮಮತೆಯಿಂದ ಕಾಣುವವರೂ ಆಗಿರಬೇಕು. ಶಾಲೆಯು ಹೀಗೆ ಚಟುವಟಿಕೆಯ ಕೇಂದ್ರವಾಗಿ ಮಕ್ಕಳನ್ನು ಆಕರ್ಷಿಸಿ ಅವರ ವ್ಯಕ್ತಿತ್ವವನ್ನು ಅರಳಿಸಬೇಕು. ಹೀಗಾದಲ್ಲಿ ಮಾತ್ರ ಅದು ಶಿಕ್ಷಣದ ನಿಜವಾದ ಸಾಧನವೆನಿಸುವುದು.

ಗ್ರಂಥಾಲಯವು ಶಿಕ್ಷಣದ ಇನ್ನೊಂದು ಸಾಧನವಾಗಿದೆ. ಗ್ರಂಥಾಲಯದಲ್ಲಿ ಅಶ್ಲೀಲ ಕಾದಂಬರಿಗಳನ್ನಾಗಲಿ, ಲಘು ಸಾಹಿತ್ಯದ ಪುಸ್ತಕಗಳನ್ನಾಗಲಿ ಇಡಕೂಡದು. ಇಂಥ ಪುಸ್ತಕಗಳನ್ನು ಓದಲು ಎಲ್ಲರಿಗೂ ಆಸ್ಥೆಯೇನೋ ನಿಜ; ಆದರೆ ಆ ಓದಿನಿಂದ ಲಾಭಕ್ಕಿಂತ ಹಾನಿಯೇ ಹೆಚ್ಚು. ಗ್ರಂಥಾಲಯಗಳಲ್ಲಿ ಐತಿಹಾಸಿಕ ಹಾಗೂ ಪೌರಾಣಿಕ ಕಾದಂಬರಿಗಳಿರಬೇಕು; ಸಮಾಜದಲ್ಲಿ ಪ್ರಚಲಿತವಿರುವ ಉದ್ಯೋಗಗಳ ಬಗೆಗೆ ಗ್ರಂಥಗಳಿರಬೇಕು; ಅಂದರೆ ಆಯಾ ಉದ್ಯೋಗಗಳಲ್ಲಿ ತೊಡಗಿದವರಿಗೆ ತಮ್ಮ ಉದ್ಯೋಗಗಳಲ್ಲಿ ಪ್ರಗತಿಯನ್ನು ಸಾಧಿಸಲು ಅನುಕೂಲವಾಗುವುದು. ರಾಷ್ಟ್ರೀಯ ಮನೋಭಾವವನ್ನು ಬೆಳೆಸುವ, ಶೀಲ ಸಂವರ್ಧನೆಯನ್ನುಂಟು ಮಾಡುವ, ಭಾವೈಕ್ಯಕ್ಕೆ ನೆರವಾಗುವ ಪುಸ್ತಕಗಳಿರುವುದು ಒಳ್ಳೆಯದು. ಅದರಂತೆ ಶಿಶು ಸಾಹಿತ್ಯ, ಸಾಕ್ಷರರಿಗೆ ಉಪಯುಕ್ತವಿರುವ ಪುಸ್ತಕಗಳನ್ನೂ ಗ್ರಂಥಾಲಯದಲ್ಲಿ ಸಂಗ್ರಹಿಸಬೇಕು. ಹೀಗೆ ಗ್ರಂಥಾಲಯವು ಏರ್ಪಟ್ಟರೆ ಅದು ಉತ್ತಮ ಶಿಕ್ಷಣದ ಸಾಧನವಾಗುವುದರಲ್ಲಿ ಸಂದೇಹವಿಲ್ಲ.

ವರ್ತಮಾನ ಪತ್ರಗಳು, ಸಾಪ್ತಾಹಿಕಗಳು, ಪಾಕ್ಷಿಕಗಳು, ಮಾಸಿಕ-ತ್ರೈಮಾಸಿಕಗಳು ಜ್ಞಾನ ಪ್ರಸಾರದ ಮಹತ್ವದ ಸಾಧನಗಳಾಗಿವೆ. ಪತ್ರಿಕೆಗಳಲ್ಲಿ ಅಶ್ಲೀಲ ಜಾಹೀರಾತುಗಳಾಗಲಿ ವಿವಿಧ ಭಂಗಿಗಳನ್ನು ತೋರಿಸುವ ಚಲಚಿತ್ರ ತಾರೆಯರ ಚಿತ್ರಗಳಾಗಲಿ ಇಲ್ಲವೆ ಮನಸ್ಸಿನಲ್ಲಿ ವಿಕಾರ ಭಾವನೆಗಳನ್ನು

ಹುಟ್ಟಿಸುವ ಅಶ್ಲೀಲ ಚಿತ್ರಗಳಾಗಲಿ ಇರಕೂಡದು. ವರ್ತಮಾನ ಪತ್ರಗಳು ಕೇವಲ ರಾಜಕೀಯ ಸುದ್ದಿಗಳನ್ನು ಇಲ್ಲವೆ ಇತರ ಸುದ್ದಿಗಳನ್ನು ಬಿತ್ತರಿಸುವ ಸಾಧನಗಳಾಗಬಾರದು. ಅದರಂತೆ ಸಂಪು, ಘೆರಾವೊ, ಲೂಟಿ, ನಿಧನ, ಲಾಕ್ ಔಟ್, ದರೋಡೆ ಮೊದಲಾದ ಅನಿಷ್ಟಕಾರಕ ಸಂಗತಿಗಳನ್ನು ಮುದ್ರಿಸುವುದು ಸರಿಯಾಗದು, ಇಂಥ ಸುದ್ದಿ-ಸಂಗತಿಗಳಿಂದ ಜನರಲ್ಲಿ ಕೆಟ್ಟ ಹಾಗೂ ಉತ್ತೇಜನ ಪರ ಭಾವನೆಗಳುಂಟಾಗುವುವು. ಜನತೆಯ ಎದುರಿನಲ್ಲಿ ಒಳ್ಳೆಯ ಘಟನೆಗಳನ್ನೂ, ಸುದ್ದಿಗಳನ್ನೂ ಇಡಬೇಕು. ರಾಜಕೀಯ ಸಂಗತಿಗಳಲ್ಲದೆ ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳನ್ನೂ, ಓದುಗರಿಗೆ ಅಪರೋಕ್ಷವಾಗಿ ಶಿಕ್ಷಣವೊದಗಿಸುವ ಉಪಯುಕ್ತ ಪ್ರಕಟನೆಗಳನ್ನೂ ಮುದ್ರಿಸಬೇಕು. ಹೀಗಾದರೆ ಮಾತ್ರ ವರ್ತಮಾನ ಪತ್ರಗಳು (The Press) ಶಿಕ್ಷಣವೀಯುವ ನಿಜವಾದ ಸಾಧನಗಳಾಗುವುವು.

ಸಭೆ-ಸಮ್ಮೇಲನಗಳು, ವಿಚಾರಗೋಷ್ಠಿಗಳು, ಚರ್ಚಾ ಕೂಟಗಳು ಸಹ ಶಿಕ್ಷಣ ಪ್ರಸಾರದ ಅತ್ಯುತ್ತಮ ಸಾಧನಗಳಾಗಿವೆ. ಇವೆಲ್ಲವೂ ನಡೆಯುವುದು ಯಾವುದೊಂದು ಸಂಸ್ಥೆಯ ಇಲ್ಲವೆ ಸಾರ್ವಜನಿಕ ವೇದಿಕೆಯ ಮೇಲೆ (Platform). ಇವುಗಳಲ್ಲಿ ಚರ್ಚಿಸುವ ವಿಷಯಗಳು ಉಪಯುಕ್ತವಾಗಿರಬೇಕು. ಬಹುಸಂಖ್ಯಾಕ ಜನರು ಮಾಡುವ ಉದ್ಯೋಗಗಕ್ಕೆ ಸಂಬಂಧಿಸಿದ ವಿಷಯಗಳಾಗಲಿ, ಜನರ ಆರೋಗ್ಯಕ್ಕೆ ಸಂಬಂಧಿಸಿದ ಸಂಗತಿಗಳಾಗಲಿ ಇಲ್ಲವೆ ಶಾಲೆಯಲ್ಲಿ ಕಲಿಸಲ್ಪಡುವ ವಿಷಯಗಳಾಗಲಿ, ಹೊಸ ಹೊಸ ಶೋಧನೆಗಳಿಗೆ

ಇಲ್ಲವೆ ಪ್ರಯೋಗಗಳಿಗೆ ಅಥವಾ ಯೋಜನೆಗಳಿಗೆ ಸಂಬಂಧಿಸಿದ ಸಾಧನೆಗಳಾಗಲಿ ಇಂತಹ ವಿಚಾರಗೋಷ್ಠಿಗಳ ಇಲ್ಲವೆ ಚರ್ಚಾ ಕೂಟಗಳ, ವಿಷಯಗಳಾಗಿರಬೇಕು. ಇಂತಹ ಚರ್ಚಾಕೂಟ ಗಳಿಗೆ, ಸಭೆ ಸಮ್ಮೇಲನಗಳಿಗೆ ಆಯಾ ವಿಷಯಗಳಲ್ಲಿ ಪಾರಂಗತ ರಾದವರನ್ನು ಆಮಂತ್ರಿಸಿ ಅವರಿಂದ ಮಾರ್ಗದರ್ಶನವನ್ನೂ ಹೆಚ್ಚಿನ ಜ್ಞಾನವನ್ನೂ ಪಡೆಯಬೇಕು. ಇಂತಹ ಸಭೆ–ಸಮ್ಮೇಲ ನಗಳು ಜಾತ್ರೆಗಳಾಗದೆ ಉಪಯುಕ್ತ ಜ್ಞಾನ ಪ್ರಸಾರದ ಸಾಧನ ಗಳಾಗಬೇಕು.

ಕೀರ್ತನ, ಪುರಾಣ, ಪ್ರವಚನ, ಸಂಗೀತ ಗೋಷ್ಠಿಗಳು, ಲಾವಣಿ ಪದಗಳು, ಗೀಗೀ ಮೇಳಗಳು, ಗೊಂದಲಿಗರ ಕಥೆಗಳು ಇವೇ ಮೊದಲಾದ ಕಾರ್ಯಕ್ರಮಗಳು ಮನರಂಜನೆಯನ್ನೂ, ಶಿಕ್ಷಣವನ್ನೂ ಏಕಕಾಲಕ್ಕೆ ನೀಡುವ ಸಾಧನಗಳಾಗಿವೆ. ಕೀರ್ತ ನೆಗಳು ಪೌರಾಣಿಕ ಪ್ರಸಂಗಗಳನ್ನು ಕುರಿತಾಗಲಿ, ಐತಿಹಾಸಿಕ ಘಟನೆಗಳಿಗೆ ಸಂಬಂಧಿಸಿದವುಗಳಾಗಲೀ ಇರುವುದು ಲೇಸು. ರಾಮಾಯಣ ಮಹಾಭಾರತಗಳಲ್ಲಿಯ ವಿವಿಧ ಸನ್ನಿವೇಶಗಳನ್ನು ಆಯ್ದುಕೊಳ್ಳಬೇಕು. ಇಂತಹ ಸನ್ನಿವೇಶಗಳು ಭಕ್ತಿರಸ ಪ್ರಧಾನವಾಗಿರಬೇಕು; ಇಲ್ಲವೆ ಮಾತೃಭಕ್ತಿ, ರಾಷ್ಟ್ರಭಕ್ತಿ, ಬಂಧು ಪ್ರೇಮ, ಸ್ವಾಮಿನಿಷ್ಠೆ, ತ್ಯಾಗ ಮನೋಭಾವ ಇತ್ಯಾದಿ ಸದ್ಗುಣ ಗಳನ್ನು ಬಿಂಬಿಸುವಂತಹವಿದ್ದರೆ ಹೆಚ್ಚು ಲೇಸು. ತಂದೆ ದಶರಥ ರಾಜನ ವಚನ ಪಾಲನೆಗಾಗಿ ಶ್ರೀ ರಾಮಚಂದ್ರನು ವನವಾಸಕ್ಕೆ ಹೋದ ಪ್ರಸಂಗ; ಭರತನ ಭ್ರಾತೃಪ್ರೇಮದ ಸಂದರ್ಭ, ಇಲ್ಲವೆ ಮಹಾಭಾರತದಲ್ಲಿ ಬರುವ ಪಾಶುಪತಾಸ್ತ್ರವನ್ನು ಪಡೆಯ

ಲೋಸುಗ ಇಂದ್ರಕೀಲ ಪರ್ವತದಲ್ಲಿ ಅರ್ಜುನನು ತಪಶ್ಚರ್ಯ ಮಾಡಿದ ಸನ್ನಿವೇಶ; ಕರ್ಣ ಕುಂತೀದೇವಿಯರ ಸಂವಾದ; ಕೃಷ್ಣನು ಕರ್ಣನ ಮನವೊಲಿಸುವ ಪ್ರಸಂಗ ಇತ್ಯಾದಿ ಸಂಗತಿಗಳನ್ನು ಆಯ್ದು ಕಿರ್ತನ ಹೇಳಿಸಬೇಕು ಕೇಳಬೇಕು. ಅದರಂತೆ ನರಗುಂದದ ಬಂಡಾಯ ಇಲ್ಲವೆ ಕಿತ್ತೂರ ರಾಣಿ ಚೆನ್ನಮ್ಮನ ವೀರಶೌರ್ಯಾದಿಗಳನ್ನು ಕುರಿತಾದಪ್ರಸಂಗಗಳನ್ನು ಕೀರ್ತನಕ್ಕೆಅಳವಡಿಸಿ ಕೇಳಬೇಕು. ಹೀಗೆ ಕೀರ್ತನಗಳನ್ನು ಶಿಕ್ಷಣದ ಸಾಧನಗಳನ್ನಾಗಿ ಮಾರ್ಪಡಿಸಬಹುದು.

ಶ್ರಾವಣ ಮಾಸದಲ್ಲಿ ಇಲ್ಲವೆ ಇತರ ಮಾಸಗಳಲ್ಲಿ ಗುಡಿಗಳಲ್ಲಿ ಇಲ್ಲವೆ ಮಠಗಳಲ್ಲಿ ಅಥವಾ ವಿವಿಧ ಧರ್ಮೀಯರ ಧಾರ್ಮಿಕ ಮಂದಿರಗಳಲ್ಲಿ ಪುರಾಣಗಳನ್ನು ಕೇಳಿಸುವುದು ನಮ್ಮ ನಾಡಿನಲ್ಲಿ ಪುರಾತನ ಕಾಲದಿಂದ ನಡೆದು ಬಂದಿದೆ. ಆಯಾಧರ್ಮಗಳಲ್ಲಿ ಆಗಿ ಹೋದ ಸಾಧು–ಸಂತರ, ಮಹಾನ್ ಸ್ವಾಮಿಗಳ, ಆಚಾರ್ಯರ ಕುರಿತು ಪುರಾಣಗಳನ್ನು ಕೇಳುವುದರಿಂದ ಭಕ್ತಿ ಭಾವನೆಯು ಬೆಳೆದು ಬರುವುದು, ಸ್ವಧರ್ಮದ ಬಗ್ಗೆ ಅಭಿಮಾನವು ಜಾಗ್ರತವಾಗುವುದಲ್ಲದೆ ಪರಧರ್ಮಗಳ ಬಗೆಗೆ ಸಹಿಷ್ಣುತೆಯೂ ಉಂಟಾಗುವುದು. ಜನರ ನೀತಿಯ ಅಭಿವೃದ್ಧಿಗೆ ಇಂತಹ ಪುರಾಣ ಶ್ರವಣವು ಅತ್ಯವಶ್ಯ. ಹೀಗೆ ಪುರಾಣ ಪುಣ್ಯ ಕಥೆಗಳು ಶಿಕ್ಷಣದ ಸಾಧನಗಳಾಗಿವೆ.

ಹಳ್ಳಿಗಳಲ್ಲಿ ಲಾವಣಿಗಳನ್ನು, ಗೀಗೀ ಪದಗಳನ್ನು ಗೊಂದಲಿಗರ ಕಥೆಗಳನ್ನು ಹೇಳಿಸುವ ಪರಂಪರೆಯು ಸಾಗಿ

ಬಂದಿದೆ. ಇತ್ತೀಚೆಗೆ ಇದು ಕಡಿಮೆಯಾಗುತ್ತಿದೆಯೇನೋ ನಿಜ; ಆದರೆ ಇವು ಶಿಕ್ಷಣದ ಉತ್ತಮ ಸಾಧನಗಳಾಗಿವೆ. ಲಾವಣಿ ಹಾಗೂ ಗೀಗೀ ಪದಗಳು ಅಶ್ಲೀಲವಿರಕೂಡದು. ಒಳ್ಳೆಯ ಪದಗಳನ್ನೂ, ವೀರಾವೇಶದ ಹಾಗೂ ರಾಷ್ಟ್ರ ಭಕ್ತಿಯನ್ನು ಹುಟ್ಟಿಸುವ ಪದಗಳನ್ನೂ, ಹೇಳಿಸಬೇಕು ಕೇಳಬೇಕು. ಸ್ವಾತಂತ್ರ್ಯ ಪೂರ್ವದಲ್ಲಿ ನಡೆದ ಚುನಾವಣೆಯ ಕಾಲಕ್ಕೆ ರಾಷ್ಟ್ರೀಯ ಗೀಗೀ ಮೇಳಗಳು ನಮ್ಮ ನಾಡಿನಲ್ಲಿ ಅಲ್ಲಲ್ಲಿ ಕಾಣಿಸಿಕೊಂಡಿದ್ದವು. ಅಂದು ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಜಯ ಸಿಗಲು ಇಂಥ ಗೀಗೀ ಮೇಳಗಳೇ ಕಾರಣವಾದವೆಂದು ಹೇಳಬಹುದು.

ಹಳ್ಳಿಗಳಲ್ಲಿ ಗೊಂದಲಿಗರ ಕಥೆಗಳು ಆಗಾಗ್ಗೆ ನಡೆಯುತ್ತಿದ್ದವು. ಇಂಥ ಕಥೆಗಳು ಕಾಲ್ಪನಿಕವಾಗಿದ್ದರೂ ಭಕ್ತಿರಸ ಇಲ್ಲವೆ ವೀರರಸ ಪ್ರಧಾನವಾಗಿರುತ್ತಿದ್ದವು; ರಾತ್ರಿ ಹತ್ತು ಗಂಟೆಯಿಂದ ಪ್ರಾರಂಭವಾದ ಈ ಕಥೆಗಳು ಸಾಮಾನ್ಯವಾಗಿ ಬೆಳಗಿನ ಜಾವದವರೆಗೆ ನಡೆಯುತ್ತಿದ್ದವು. ಹಳ್ಳಿಗರಿಗೆ ಇವು ಆಸಕ್ತಿದಾಯಕವಾಗಿ ಪರಿಣಮಿಸುತ್ತಿದ್ದವು. ಈ ಕಥೆಗಳು ಮನರಂಜನೆಯ ಜೊತೆಗೆ ಶಿಕ್ಷಣವನ್ನು ಸಹ ನೀಡುತ್ತಿದ್ದವು.

ನಾಟಕಗಳು ಶಿಕ್ಷಣದ ಉತ್ತಮ ಸಾಧನಗಳಾಗಿವೆ. ಆದುದರಿಂದಲೇ "The School Shall be a Theatre" ಎಂದು ಶಿಕ್ಷಣ ತಜ್ಞರು ಹೇಳಿದುದುಂಟು. ಶಾಲೆಯಲ್ಲಿ ಆಡಿಸುವ ನಾಟಕಗಳು ಚಿಕ್ಕವಾಗಿದ್ದು ಭಕ್ತಿರಸವನ್ನೋ, ರಾಷ್ಟ್ರ ಪ್ರೇಮ

ವನ್ನೋ ಹುಟ್ಟಿಸುವಂಥವಿರಬೇಕು. ನಾಟಕಗಳು ಸಾರ್ವಜನಿಕರಿಗೂ ಶಿಕ್ಷಣವೀಯಬಲ್ಲವು. ಕಿತ್ತೂರ ಚೆನ್ನಮ್ಮ, ನರಗುಂದದ ಬಂಡಾಯ ಮೊದಲಾದ ನಾಟಕಗಳು ರಾಷ್ಟ್ರ ಪ್ರೇಮವನ್ನು ಹುಟ್ಟಿಸಿದರೆ 'ಸಹಕಾರ ಸಂಭ್ರಮ'ದಂಥ ನಾಟಕಗಳು ಸಹಕಾರದ ಮಹತ್ವ ಇತ್ಯಾದಿಯನ್ನು ತಿಳಿಸುತ್ತವೆ.

ಚಲನಚಿತ್ರ (Cinema) ವು ಸಹ ಶಿಕ್ಷಣದ ಮಹತ್ವದ ಸಾಧನವಾಗಿದೆ. ಐತಿಹಾಸಿಕ ಹಾಗೂ ಪೌರಾಣಿಕ ಚಿತ್ರಗಳು ಜನರಲ್ಲಿ ಶೌರ್ಯ, ಧೈರ್ಯಗಳನ್ನು, ಭಕ್ತಿಯನ್ನು, ಹುಟ್ಟಿಸುವುದರಲ್ಲಿ ಸಂಶಯವಿಲ್ಲ. ರೇಣುಕಾಮಹಾತ್ಮೆಯಂತಹ ಚಿತ್ರಗಳು ಭಕ್ತಿರಸವನ್ನುಂಟು ಮಾಡಿದರೆ ಕಿತ್ತೂರ ಚೆನ್ನಮ್ಮ ಚಿತ್ರದಂತಹವು ದೇಶ ಪ್ರೇಮವನ್ನು ಹುಟ್ಟಿಸುತ್ತವೆ.

ಸುತ್ತಲಿನ ಸಮಾಜವು ಸಹ ಶಿಕ್ಷಣದ ಸಾಧನವೇ ಆಗಿದೆ. ಸಮಾಜವು ಒಳ್ಳೆಯದಿದ್ದರೆ ಶಾಲೆಯು ಒಳ್ಳೆಯದಾಗುವುದು. ಮಗುವು ಶಾಲೆಯಲ್ಲಿ ಇರುವುದು ದಿನಾಲು ಕೆಲವು ಗಂಟೆಗಳು ಮಾತ್ರ ಅವನು ಹೆಚ್ಚು ವೇಳೆಯನ್ನು ತನ್ನ ಮನೆಯಲ್ಲಿ ಹಾಗೂ ಸಮಾಜದಲ್ಲಿ ಕಳೆಯುತ್ತಾನೆ. ಇದರಿಂದ ಸಮಾಜದ ಪ್ರಭಾವವು ಅವನ ಮೇಲೆ ಹೆಚ್ಚಿಗಾಗುವುದು. ಆದುದರಿಂದ ಸಮಾಜವನ್ನು ಒಳ್ಳೆಯದನ್ನಾಗಿ ಮಾಡಲು ಯತ್ನಿಸಬೇಕು. ಒಳ್ಳೆಯ ಸಮಾಜವು ಮಕ್ಕಳ ಮೇಲೆ ಒಳ್ಳೆಯ ಪರಿಣಾಮವನ್ನುಂಟು ಮಾಡಬಲ್ಲುದು. ಸುಶಿಕ್ಷಿತ, ಸುಸಂಸ್ಕೃತ ಸಮಾಜದಲ್ಲಿರುವ ಮಕ್ಕಳು ಒಳ್ಳೆಯರಾಗುವುದು ಸಹಜ.

ಮೇಲ್ಕಾಣಿಸಿದ ಸಾಧನಗಳು ಮಕ್ಕಳಿಗೂ ಹಾಗೂ ಪ್ರೌಢರಿಗೂ ಉತ್ತಮ ಶಿಕ್ಷಣವನ್ನೀಯಬಲ್ಲವು. ಅವುಗಳನ್ನು ಶಿಕ್ಷಣದ ಸಾಧನಗಳನ್ನಾಗಿ ಪರಿವರ್ತಿಸುವದು ಸರಕಾರ ಹಾಗೂ ಶಿಕ್ಷಣ ತಜ್ಞರ ಕಾರ್ಯವಾಗಿದೆ.

೩. ಭಾರತದಲ್ಲಿ ಪ್ರಾಚೀನ ಶಿಕ್ಷಣ ಪದ್ಧತಿ

ಬಹು ಪುರಾತನ ಕಾಲದಲ್ಲಿ ನಮ್ಮ ದೇಶದ ಶಿಕ್ಷಣ ಪದ್ಧತಿಯು ಧಾರ್ಮಿಕ ಪ್ರಭಾವಕ್ಕೆ ಒಳಗಾಗಿತ್ತೆಂದು ಕಂಡು ಬರುತ್ತದೆ ಶಿಕ್ಷಣವು ಆತ್ಮಾನಂದ ಇಲ್ಲವೆ ಆತ್ಮಸಾಕ್ಷಾತ್ಕಾರಕ್ಕೆ ಸಹಾಯ ಮಾಡಬೇಕೆಂಬುದು ಪ್ರಾಚೀನ ಹಿಂದೂ ಜನರ ವಿಚಾರವಾಗಿತ್ತು. ಕೇವಲ ವಸ್ತು ವಿಷಯಕ ಜ್ಞಾನಾರ್ಜನೆಗೆ ಸಹಾಯ ಮಾಡುವುದು ಶಿಕ್ಷಣವಲ್ಲವೆಂಬುದು, ಅದು ಹೊರಗಿನ ವಸ್ತುವಿಗಿಂತ ವೈಯಕ್ತಿಕತೆಗೂ, ಬಾಹ್ಯ ಜಗತ್ತಿಗಿಂತ ಆಂತರಿಕ; ಜಗತ್ತಿಗೂ ಹೆಚ್ಚಾಗಿ ಸಂಬಂಧಿಸಿರಬೇಕೆಂಬುದು ಅವರ ಅಭಿಪ್ರಾಯವಾಗಿತ್ತು. ಶಿಕ್ಷಣವು ಗುರುವಿನ ಮನೆಯಲ್ಲಿಯೇ ಸಾಗುತ್ತಿತ್ತು. ಶಿಷ್ಯನು ಗುರುವನ್ನು ಶೋಧಿಸಿ, ಗುರುವಿನ ಸಂಗಡ ಅವನ ಕುಟುಂಬದ ಸದಸ್ಯನೆಂಬಂತೆ ಇರುತ್ತಿದ್ದನು. ಗುರುವು ಶಿಷ್ಯನನ್ನು ತನ್ನ ಮಗನಂತೆ ನೋಡಿಕೊಳ್ಳುತ್ತಿದ್ದನು. ಗುರುವಿನ ಮನೆಯು ಅರಣ್ಯದ ಪರಿಸರದ ಮಧ್ಯದಲ್ಲಿ. ಇದ್ದು ಅದೊಂದು ಆಶ್ರಮವೆಂಬಂತೆ ಕಂಡುಬರುತ್ತಿತ್ತು. ಶಹರ ಇಲ್ಲವೆ ಗ್ರಾಮದ ಗದ್ದಲ, ಗಜಿಬಿಜಿಯಿಂದ ದೂರವಿದ್ದು ಏಕಾಂತದಲ್ಲಿ ಮತ್ತು ಪ್ರಶಾಂತ ವಾತಾವರಣದಲ್ಲಿ ಗುರುವಿನ

ಈ ಆಶ್ರಮವು ನೆಲೆಸಿರುತ್ತಿತ್ತು. ಗುರು ಮತ್ತು ಶಿಷ್ಯರಲ್ಲಿ ನಿರಂತರವಾದ ಹಾಗೂ ಗಾಢವಾದ ಸಂಬಂಧವಿರುವುದು ಶಿಕ್ಷಣದ ದೃಷ್ಟಿಯಿಂದ ಅತ್ಯವಶ್ಯವೆಂದು ತಿಳಿಯಲಾಗಿತ್ತು. ಶಿಷ್ಯನು ತನ್ನ ಗುರುವಿನ ಆಂತರಿಕ ಪದ್ಧತಿಗಳನ್ನೂ, ಯೋಗ್ಯತೆಯ ರಹಸ್ಯಗಳನ್ನೂ, ಜೀವನದ ಹಾಗೂ ಕೆಲಸದ ಚೈತನ್ಯವನ್ನೂ ಅಳವಡಿಸಿಕೊಳ್ಳಲು ಯತ್ನಿಸುತ್ತಿದ್ದನು. ಈ ಎಲ್ಲ ಸಂಗತಿಗಳನ್ನು ಅರಗಿಸಿಕೊಳ್ಳಬೇಕಾದರೆ ಶಿಷ್ಯನು ಕುಶಲ ಕಲೆಗಾರನಾದ, ನೀತಿವಂತನಾದ, ಆಧ್ಯಾತ್ಮಿಕ ಪ್ರವೃತ್ತಿಯವನಾದ ತನ್ನ ಗುರುವಿನೊಡನೆ ವಾಸಿಸುವುದು ಹಾಗೂ ಜೀವನ ಸಾಗಿಸುವುದು ಅನಿವಾರ್ಯವಾಗಿತ್ತು.

ಪ್ರಾಚೀನ ಶಿಕ್ಷಣ ಕ್ರಮದಲ್ಲಿ ಗುರು-ಶಿಷ್ಯರಲ್ಲಿಯ ವ್ಯಕ್ತಿಗತ ಮನೋಭಾವ, ಆತ್ಮೀಯತೆ ಸೌಹಾರ್ದ ಸಂಬಂಧಗಳು ಶಿಕ್ಷಣವನ್ನು ರೂಪಿಸುತ್ತವೆ. ಶಿಷ್ಯನು ಗುರುವಿಗೆ ಸಂಬಂಧಿಸಿದವನೇ ಹೊರತು ಸಂಸ್ಥೆಗೆ ಇಲ್ಲವೆ ಶಾಲೆಯೆಂದು ಕರೆಯಲ್ಪಡುವ ಭಾವನಾರೂಪಕ್ಕೆ ಅಲ್ಲ. ಗುರುವಿನ ಮನೆಯೇ ಶಾಲೆಯಾಗಿತ್ತು. ಅದು ವಿದ್ಯಾರ್ಥಿಗೆ ವಾಸಸ್ಥಾನವೂ, ಉದರ ಪೋಷಣೆಯ ಸ್ಥಳವೂ ಆಗಿತ್ತು; ಅವನ ಚಾರಿತ್ರ್ಯವನ್ನೂ, ಹೃದಯ ಹಾಗೂ ಮನಸ್ಸುಗಳ ವೈಶಾಲ್ಯವನ್ನೂ ಬೆಳೆಸುವ ಪವಿತ್ರ ಮಂದಿರವಾಗಿತ್ತು; ಧಾರ್ಮಿಕ ಪ್ರಭಾವಕ್ಕೆ ಒಳಗಾಗುವಂತೆ ಮಾಡುವ ಶಿಕ್ಷಣವನ್ನು ನೀಡುವ ಮತ್ತು ಆಧ್ಯಾತ್ಮಿಕ ಶಿಖರಕ್ಕೆ ಅವನನ್ನು ಮುಟ್ಟಿಸುವ ಸಂಕೇತವಾಗಿತ್ತು.

ಗುರು-ಶಿಷ್ಯರ ಮಧುರ ಸಂಬಂಧದ ಈ ಶಿಕ್ಷಣ ಕ್ರಮದಲ್ಲಿ ಶಿಕ್ಷಣಶಾಸ್ತ್ರದ ಇತರ ಮೂಲಭೂತ ತತ್ವಗಳು ಕೂಡಿಕೊಂಡಿವೆ. ಫ್ರಾಯಿಡ್ ಎಂಬ ವಿದ್ವಾಂಸನು ವ್ಯಾಖ್ಯಾನಿಸುವಂತೆ ಗುರುವು ಶಿಷ್ಯನ (ವಿದ್ಯಾರ್ಥಿಯ) ಜ್ಞಾತೃವಾಗಿದ್ದನು, ಅಂದರೆ ಗುರುವು ಬೆಳೆದು ಬಂದ ಆದರ್ಶಗಳ ಹಾಗೂ ಪರಂಪರೆಗಳ ಮೂರ್ತ ಸ್ವರೂಪದ ಸ್ಥಾನಗಳನ್ನು ಶಿಷ್ಯನು ಆಕ್ರಮಿಸುತ್ತಿದ್ದನು. ಗುರುವಿನೊಡನೆ ಅವನ ಅನುಭವಗಳಲ್ಲಿ ಪಾಲುಗೊಳ್ಳುವ ಕ್ರಿಯೆಯು ಶಿಷ್ಯನಲ್ಲಿ ನಿರೋಧದ ಪ್ರವೃತ್ತಿಯನ್ನು ಪ್ರತಿಬಂಧಿಸುತ್ತಿತ್ತು. ಹೀಗೆ ಈ ಪದ್ಧತಿಯಲ್ಲಿ ಶಿಷ್ಯನ ಆಂತರಿಕ ಜೀವನವು ಯೋಗ್ಯ ರೀತಿಯಲ್ಲಿ ಬೆಳೆದು ಬರುತ್ತಿತ್ತು. ಗುರುವಿನ ಮನೆಯಲ್ಲಿಯ ಆದರ್ಶ ವಾತಾವರಣವು ಶಿಷ್ಯನನ್ನು ಸಮಾಜದಲ್ಲಿಯ ಅನಿಷ್ಟಗಳಿಂದ ರಕ್ಷಿಸುತ್ತಿತ್ತು. ಗುರುವಿನ ಮನೆಯಲ್ಲಿಯ ಕೆಲಸಗಳನ್ನು ಮಾಡಬೇಕಾಗುತ್ತಿದ್ದುದರಿಂದ ಶಿಷ್ಯನಲ್ಲಿ ಶಾಂತ ಹಾಗೂ ಸಹನೆಯ ವ್ಯಕ್ತಿತ್ವವು ಅಭಿವೃದ್ಧಿ ಹೊಂದುತ್ತಿತ್ತು.

ಗುರುವಿನ ಮನೆಯಲ್ಲಿ ಅಗ್ನಿಯನ್ನು ಹೊತ್ತಿಸುವುದಕ್ಕಾಗಿ ಶಿಷ್ಯನು ಅಡವಿಗೆ ಹೋಗಿ ಕಟ್ಟಿಗೆಯನ್ನು ತರುತ್ತಿದ್ದನು. ಗುರುವಿನ ಮನೆಯ ದನಕರುಗಳನ್ನು ಕಾಯುವುದು; ಕಸಗೂಡಿಸುವುದು; ಒಟ್ಟಾರೆ ಗುರುವಿನ ಮನೆಯ ಯಾವತ್ತೂ ಕೆಲಸಗಳನ್ನು ಮಾಡುವುದು, ಗುರುವಿನ ಸೇವೆ ಗೈಯುವುದು ಶಿಷ್ಯನ ಕೆಲಸವಾಗಿತ್ತು. ಹೀಗೆ ಶಿಕ್ಷಣವು ದೈಹಿಕ ಶ್ರಮ ಹಾಗೂ ವೃತ್ತಿ ತರಬೇತಿಯೊಡನೆ ಹೊಂದಿಕೆಯಾಗಿತ್ತು; ಈ ವೃತ್ತಿಯು

ನಿತ್ಯಜೀವನಕ್ಕೆ ಸಂಬಂಧಿಸಿದುದಾಗಿತ್ತು; ವಸ್ತುಗಳೊಡನೆ ಮತ್ತು ಭೌತಿಕ ಪರಿಸರದೊಡನೆ ವ್ಯವಹರಿಸುವುದಕ್ಕೆ ತರಬೇತಿಯನ್ನು ಒದಗಿಸುತ್ತಿತ್ತು.

ಪ್ರತಿನಿತ್ಯವೂ ಭಿಕ್ಷಾಟನಕ್ಕೆ ಹೋಗುವುದು ಶಿಷ್ಯನ ಇನ್ನೊಂದು ಕರ್ತವ್ಯವಾಗಿತ್ತು. ಈ ಭಿಕ್ಷಾಟನವು ತನ್ನ ಸ್ವಂತಕ್ಕಾಗಿ ಇರದೆ ಶಾಲೆಯ ಸಂವರ್ಧನೆಗಾಗಿ ಇರುತ್ತಿತ್ತು. ಈ ಮಧುಕರಿಯು ವಿದ್ಯಾರ್ಥಿಯಲ್ಲಿ ಮಾನವೀಯತೆಯ ಮತ್ತು ತ್ಯಾಗದ ಮನೋಭಾವನೆಯನ್ನು ಹುಟ್ಟಿಸುತ್ತಿತ್ತು. ಇದರಿಂದ ಶಿಷ್ಯನ ವ್ಯಕ್ತಿತ್ವದ ಸಂಘಟನೆಯು ಪರಿಪೂರ್ಣವಾಗುತ್ತಿತ್ತು. ಅಹಂಭಾವನೆಯು ಕುಂಠಿತವಾಗಿ, ಅಸಿಷ್ಟ ಇಚ್ಛೆಗಳು ಹಾಗೂ ಭಾವನೆಗಳು ಬತ್ತಿಹೋಗಿ ಶಿಷ್ಯನ ಆಂತರಿಕ ಜೀವನವು ಸಮತೋಲವನ್ನು ತಳೆಯುತ್ತಿತ್ತು. ಮಧುಕರಿಯು ಸ್ವಕೀಯವನ್ನು ವರ್ಧಿಸುವ ಸ್ವತಂತ್ರ ವೃತ್ತಿ ಬೆಳೆಯಿಸುತ್ತಿತ್ತು.

ಈ ಶಿಕ್ಷಣದ ಯೋಜನೆಯಲ್ಲಿ ಅಭ್ಯಾಸಕ್ಕೆ ಪೂರಕ ಸ್ಥಾನವಿರುತ್ತಿತ್ತು. ಶಿಕ್ಷಣವು ಶ್ರವಣ, ಮನನ, ನಿಧಿಧ್ಯಾಸಗಳೆಂಬ ಮೂರು ಹಂತಗಳಲ್ಲಿ ನಡೆಯುತ್ತಿತ್ತು. ಗುರುವು ಹೇಳಿದುದನ್ನು ಲಕ್ಷ್ಯಗೊಟ್ಟು ಕೇಳುವುದು, ಅವನು ಹೇಳಿದಂತೆ ಹೇಳುವುದು, ರೂಢಿ ಮಾಡುವುದು, ಮತ್ತು ಅರಗಿಸಿಕೊಂಡು ಆಚರಿಸುವುದು ಶಿಕ್ಷಣ ಕ್ರಮವಾಗಿತ್ತು. ಗುರುವು ಆ ಕಾಲದ ಸಜೀವ

ಸಂಚಾರೀ ಗ್ರಂಥಾಲಯುವಾಗಿದ್ದನು. ಜ್ಞಾನವು ರಕ್ತಗತವಾಗಿರಬೇಕೆಂದು ಭಾವಿಸಲಾಗಿತ್ತು. ನಿತ್ಯ ಜೀವನವೇ ಅವರಿಗೆ ಶಿಕ್ಷಣವಾಗಿತ್ತು. "It was education for Life and through Life". ಶಿಕ್ಷಣ ಮತ್ತು ಜೀವನಗಳೆರಡೂ ತಳಕು-ಮಳಕಾಗಿದ್ದವು. ಈ ಋಷ್ಯಾಶ್ರಮಗಳಲ್ಲಿ ಜೀವನಾವಶ್ಯಕವಾದ ಮೂಲೋದ್ಯೋಗಗಳ ಜೊತೆಗೆ ವೇದೋಪನಿಷತ್ತುಗಳ ಜ್ಞಾನವು ಲಭಿಸುತ್ತಿತ್ತು. ಧರ್ಮವು ಶಿಕ್ಷಣದ ಹಾಸು-ಹೊಕ್ಕಾಗಿತ್ತು. ಸಚ್ಚಾರಿತ್ರ್ಯಕ್ಕೆ ಆದ್ಯತೆ ಕೊಡಲಾಗಿತ್ತು. ಕಾಡಿನ ಈ ಶಾಲೆಗಳು ಮತ್ತು ಋಷ್ಯಾಶ್ರಮಗಳು ಭಾರತದ ವಿಚಾರ ಪ್ರಣಾಲಿಯನ್ನೂ, ಸಂಸ್ಕೃತಿಯನ್ನೂ ನಿರ್ಮಿಸಲು ಕಾರಣವಾಗಿವೆ. ರವೀಂದ್ರನಾಥ ಠಾಕೂರರು, "ಭಾರತದಲ್ಲಿ ನಮಗೆ ಕಂಡುಬರುವ ಆಶ್ಚರ್ಯದ ಸಂಗತಿಯೆಂದರೆ ಇಲ್ಲಿ ಸಕಲ ಸುಧಾರಣೆಯ ಕಾರಂಜಿಯು ಶಹರವಾಗಿರದೆ ಅರಣ್ಯವಾಗಿದೆ" ಎಂದು ಹೇಳಿದ್ದಾರೆ. ಕೋಳಿ ಕೂಗದ ಮುನ್ನವೇ ಏಳುವುದು, ಪ್ರಾತರ್ವಿಧಿಗಳನ್ನು ತೀರಿಸುವುದು, ತಣ್ಣೀರಿನ ಸ್ನಾನ ಮಾಡುವುದು ಶ್ರಮದಾಯಕ ಅಂದರೆ ನಿತ್ಯೋಪಯುಕ್ತ ಕೆಲಸಗಳನ್ನು ಮಾಡುವುದು– ಇವೇ ಮೊದಲಾದ ಕ್ರಮಗಳಿಂದ ಕೂಡಿದ ಈ ಶಿಕ್ಷಣವು, ಶಿಷ್ಯನನ್ನು ಎಂತಹ ಕಠಿಣತರ ಸಮಸ್ಯೆಗಳನ್ನೂ ಎದುರಿಸಲು ಸಿದ್ಧಗೊಳಿಸುತ್ತಿತ್ತು. ಹೀಗೆ ಈ ಪದ್ಧತಿಯು ಚೇತನ ಶಕ್ತಿಗೆ, ಏಕಾಂತತೆಗೆ, ಆತ್ಮಾವಿಷ್ಕರಣಕ್ಕೆ ವಿವಿಧ ಜೀವನ ರೀತಿಗಳ ಹೊಂದಾಣಿಕೆಗೆ, ವ್ಯಕ್ತಿತ್ವದ ಪರಿಪೂರ್ಣ ಬೆಳವಣಿಗೆಗೆ, ಆತ್ಮಜ್ಞಾನದ ತಿಳಿವಳಿಕೆಗೆ ಅವಕಾಶ

ವನ್ನು ಕಲ್ಪಿಸಿ ಆಂತರಿಕ ಜೀವನವನ್ನು ಪರಿಶುದ್ಧ ಗೊಳಿಸುತ್ತಿತು. ಸಮಾಜಕ್ಕೆ ಉಪಯುಕ್ತ ವ್ಯಕ್ತಿಗಳನ್ನು ಒದಗಿಸುತ್ತಿತ್ತು.

೪. ಭಾರತದಲ್ಲಿ ಅರ್ವಾಚೀನ ಶಿಕ್ಷಣ ಪದ್ಧತಿ

ಶಿಕ್ಷಣದ ಪ್ರಾಚೀನ ಆದರ್ಶಗಳನ್ನು ಆಧುನಿಕ ಸ್ಥಿತಿಗಳಿಗೆ ಅಳವಡಿಸಿಕೊಳ್ಳಬೇಕೆಂಬುದು ನಿಸ್ಸಂಶಯದ ಮಾತಾಗಿದೆ. ಆ ಕಾಲವೂ ಬರಬಹುದು. ಕಾಲಚಕ್ರದ ವಿಭ್ರಮಣಕ್ಕೆ ಸಿಕ್ಕು ಶಿಕ್ಷಣವು ತನ್ನ ಹಿಂದಿನ ಆ ಆದರ್ಶಗಳನ್ನು ಕಳೆದುಕೊಂಡಿದೆ ಯಾದರೂ ಅದರ ಉದ್ದೇಶಗಳು ಮಾತ್ರ ಎಂದಿನಂತೆ ಅಚ್ಚಳಿ ಯದೆ ಉಳಿದುಕೊಂಡಿವೆ. ಶಿಕ್ಷಣವು ಒಂದು ಅವಿಚ್ಛಿನ್ನ ಘಟಕ; ಅದರಲ್ಲಿ ಶಿಶು ಶಿಕ್ಷಣ, ಪ್ರಾಥಮಿಕ, ಮಾಧ್ಯಮಿಕ, ಉಚ್ಚ, ವಿಶ್ವವಿದ್ಯಾಲಯ, ಸಮಾಜ ಶಿಕ್ಷಣಗಳೆಂಬ ವಿವಿಧ ವಿಭಾಗ ಗಳಿರದೆ ಶಿಕ್ಷಣವೆಂಬ ಒಂದೇ ಒಂದು ಘಟಕವಿರುವುದು ಯೋಗ್ಯವೆಂದು ಹಲವು ಶಿಕ್ಷಣ ತಜ್ಞರ ಅಭಿಪ್ರಾಯ. ಶಿಕ್ಷಣವು ಒಂದು ಅಖಂಡ ಪ್ರವಾಹ; ಜನನದಿಂದ ಮರಣದವರೆಗೆ ಸಾಗುವ ನಿರಂತರ ಕ್ರಿಯೆ. ಆದುದರಿಂದ ಮೇಲೆ ಹೇಳಿದಂತೆ ಅವನ್ನು ವಿಭಜಿಸುವದು ಸರಿಯಾಗದು. ಆದರೆ ಆಡಳಿತೆಯ ಅನುಕೂಲತೆಗಾಗಿ ಹಾಗೆ ವಿಭಾಗಗಳನ್ನು ಮಾಡಲಾಗಿದೆ ಯೆಂದು ತಿಳಿದುಕೊಳ್ಳಬೇಕು. ಶಿಕ್ಷಣದ ಧ್ಯೇಯ-ಧೋರಣೆಗಳು; ಗೊತ್ತು-ಗುರಿಗಳು, ತತ್ತ್ವಗಳು ಎಂದಿನಂತೆ ಬಹು ಎತ್ತರವಾ

ಗಿವೆ: ಉದಾತ್ತವಾಗಿವೆ. ಆದರೆ ಅದು ಸಾರ್ವತ್ರಿಕವೂ, ಉಚಿತವೂ, ಕಡ್ಡಾಯವೂ ಆಗಿರುವದರಿಂದಲೋ, ಈ ಕಾರಣದಿಂದ ಕಲಿಯಲು ಇಚ್ಛೆಯಿಲ್ಲದವರನ್ನು ಲವಲವಿಕೆಯಿಲ್ಲದವರನ್ನು ಕಲಿಯಲು ತೊಡಗಿಸಿದ್ದರಿಂದಲೋ, ಹಲವಾರು ರಾಜಕೀಯ ಸ್ಥಿತ್ಯಂತರಗಳಿಂದಲೋ, ಶಿಕ್ಷಣ ತಜ್ಞರಲ್ಲದವರು ಶಿಕ್ಷಣ ರಂಗದಲ್ಲಿ ಪ್ರವೇಶಿಸಿದ್ದರಿಂದಲೋ, ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದಲೋ, ಕಾಲ ವಿಪ್ಲವದ ಪರಿಣಾಮದಿಂದಲೋ, ಬದಲಾಗುತ್ತಿರುವ ಸಾಮಾಜಿಕ ಪರಿಸ್ಥಿತಿಯ ಪರಿಣಾಮದಿಂದಲೋ ಏನೋ ಎಂಬಂತೆ ಶಿಕ್ಷಣವು ಬಹಳಷ್ಟು ಮಾರ್ಪಾಡನ್ನು ಹೊಂದಿದೆ. ಆ ಪ್ರಾಚೀನ ಕಾಲದ ಏಕಾಂತ ಜೀವನ, ಋಷ್ಯಾಶ್ರಮಗಳು, ವರ್ಣಾಶ್ರಮ ಪದ್ಧತಿ, ಧರ್ಮದ ಕಟ್ಟಳೆ, ಗುರು-ಶಿಷ್ಯರಲ್ಲಿಯ ಸಂಬಂಧ, ಆಧ್ಯಾತ್ಮಿಕ ವೃತ್ತಿ, ಕಠಿಣ ಜೀವನ, ಉಚ್ಚತಮ ವಿಚಾರ, ಜೀವನ ಸಂಬಂಧಗಳೆಲ್ಲ ಇಂದು ಮಾಯವಾಗಿವೆ.

ಇಂದು ಶಿಕ್ಷಣಕ್ಕೂ ಜೀವನಕ್ಕೂ ಸಂಬಂಧವಿಲ್ಲದಾಗಿದೆ. ಬಾಹ್ಯ ಪದವಿಗಳ ಬೆನ್ನುಹತ್ತಿ ಬಾಯಿ ಬಿಡುವ ಇಂದಿನ ಹಲವಾರು ಯುವಕರು ಜೀವನ ನಿರ್ವಹಣೆಗೆ ದಾರಿಕಾಣದೆ ಅಲೆಯುತ್ತಿರುವುದನ್ನು ಕಾಣುತ್ತಿದ್ದೇವೆ. ಅವರಿಗೆ ಶ್ರಮಗೌರವದ ಕಲ್ಪನೆಯಿಲ್ಲ; ಇದ್ದರೂ ಅದು ತಮ್ಮ ಗೌರವಕ್ಕೆ ಕಲಂಕ ತರುವಂಥದೆಂದು ತಿಳಿದು ಅದನ್ನು ಕೈಕೊಳ್ಳಲು ಹಿಂಜರಿಯುತ್ತಾರೆ. ವೃತ್ತಿ ಮಾರ್ಗದರ್ಶನವಿಲ್ಲ; ಇದ್ದರೂ ಸರಿಯಾಗಿ ತಿಳಿದಿಲ್ಲ; ತಿಳಿ

ದರೂ ಅನುಸರಿಸಲ್ಪಟ್ಟಿಲ್ಲ, ಸುಮಾರು ಎರಡು ಶತಕಗಳ ಬ್ರಿಟಿಷರ ಆಳಿಕೆಯಿಂದ ನಮ್ಮ ಮೊದಲಿನ ಶಿಕ್ಷಣವು ಬದಲಾವಣೆಯನ್ನು ಹೊಂದಿತು. ಬ್ರಿಟಿಷರ ಆಳಿಕೆಯಲ್ಲಿ ಜೀವನ ಮೌಲ್ಯಗಳೇ ಬೇರೆಯಾದುವು. ತಮ್ಮ ಆಳಿಕೆಯನ್ನು ಭದ್ರಗೊಳಿಸಲೋಸುಗ ಬ್ರಿಟಿಷರು ಪಾಶ್ಚಾತ್ಯ ಶಿಕ್ಷಣ ಪದ್ಧತಿಯನ್ನು ಬಳಕೆಯಲ್ಲಿ ತಂದರು. ಸರಕಾರಿ ನೌಕರಿಗಳ ಕೋರಿಕೆಯ ಸುಖಜೀವನಕ್ಕೆ, ಸರಕಾರಿ ನೌಕರರ ಹೊರಗಿನ ಆಡಂಬರ ಜೀವನಕ್ಕೆ, ಬೆಡಗು ಬಿನ್ನಾಣಗಳಿಗೆ ಮಾರು ಹೋದ ಅನೇಕ ಭಾರತೀಯರು ಪಾಶ್ಚಾತ್ಯ ಶಿಕ್ಷಣವನ್ನು ಪಡೆಯಲಾರಂಭಿಸಿದರು. ಇದರಿಂದಾಗಿ ಭಾರತೀಯ ಉದ್ಯೋಗಗಳು ನಶಿಸಿ ಹೋದವು; ಧಾರ್ಮಿಕ ಕಟ್ಟುನಿಟ್ಟುಗಳು ಕಳಚಲಾರಂಭಿಸಿದವು. ಶಿಕ್ಷಣದ ಜೊತೆಗೆ ಪಾಶ್ಚಾತ್ಯರ ಉಡುಪು-ತೊಡುಪುಗಳು, ಆಹಾರ-ವಿಹಾರಗಳು, ಆಚಾರ-ವಿಚಾರಗಳು ಸುಶಿಕ್ಷಿತ ಭಾರತೀಯರಲ್ಲಿ ನೆಲೆಯೂರತೊಡಗಿದವು. ಭಾರತೀಯ ಸಮಾಜದಲ್ಲಿ ಕಲಿತವರು, ಕಲಿಯದವರು. (Classes and Masses) ಎಂಬ ಎರಡು ವರ್ಗಗಳಾದುವು ಕಲಿತ ಕೆಲವೇ ಜನರು ಕಲಿಯದ ಬಹುದೊಡ್ಡ ಸಂಖ್ಯಾಕರನ್ನು ತಮ್ಮ ಅಂಕಿತದಲ್ಲಿ ಇಟ್ಟುಕೊಳ್ಳ ತೊಡಗಿದರು. ಕಲಿತವರಲ್ಲಿ ಅನೇಕರು ಬ್ರಿಟಿಷರ ಕೈಗೊಂಬೆಗಳಾಗಿ, ಅವರ ಆಳಿಕೆಯ ನೊಗವನ್ನು ಹೊತ್ತು ಬ್ರಿಟಿಷರ ಆಳಿಕೆಯನ್ನು ನಿರಾತಂಕವಾಗಿಸಾಗಿಸಲು ನೆರವಾದರು.

ಆದರೆ ಈ ಪರಿಸ್ಥಿತಿಯು ಬಹುಕಾಲ ಉಳಿಯಲಿಲ್ಲ. ಆಂಗ್ಲ ಶಿಕ್ಷಣ ಪಡೆದವರಲ್ಲಿಯೇ ಕೆಲವರು ಮೇಧಾವಿಗಳು

ಆಂಗ್ಲರ ಕುಟಿಲ ನೀತಿಯನ್ನು ಅರಿತುಕೊಂಡರು. ಆಂಗ್ಲರು ಭರತ ಖಂಡವನ್ನು ಶೋಷಿಸುತ್ತಿರುವುರೆಂಬುದನ್ನೂ, ಅವರು ಶಿಕ್ಷಣವನ್ನು ಈ ಶೋಷಣೆಯ ಅಸ್ತ್ರವನ್ನಾಗಿ ಹೇಗೆ ಉಪಯೋಗಿಸುತ್ತಿರುವುರೆಂಬುದನ್ನೂ ಅರಿತುಕೊಂಡರು. ರಾಜಾ ರಾಮ ಮೋಹನರಾಯ, ಗೋಪಾಲ ಕೃಷ್ಣ ಗೋಖಲೆ, ಸರ್ ಜಗದೀಶಚಂದ್ರ ಬೋಸ, ಲೋಕಮಾನ್ಯ ಟಿಳಕ, ಅರವಿಂದ ಘೋಷ, ಮಹಾತ್ಮಾಗಾಂಧಿ ಅವರಂಥ ಮೇಧಾವಿಗಳು ಬ್ರಿಟಿಷರ ಆಳಿಕೆಯನ್ನು ಖಂಡಿಸಿದರು. ಬ್ರಿಟಿಷ ಶಿಕ್ಷಣ ಪದ್ಧತಿಯ ಲೋಪ-ದೋಷಗಳನ್ನು ತೊಡೆದು ಹಾಕಲು ಮುಂದಾದರು. ಇದು ಗುಲಾಮಗಿರಿಯ ಶಿಕ್ಷಣ; ಭಾರತೀಯರನ್ನು ಕೊನೆತನಕ ದಾಸ್ಯದಲ್ಲಿರಿಸಲು ಯೋಜಿಸಿದ ಶಿಕ್ಷಣ; ಭಾರತವನ್ನು ಶೋಷಿಸುವ ಶಿಕ್ಷಣ ಕ್ರಮವೆಂದು ಸಾರಿದರು. ಇದನ್ನು ತೊಡೆದು ಹಾಕಿ ರಾಷ್ಟ್ರೀಯ ಶಿಕ್ಷಣವನ್ನು ರೂಪಿಸಬೇಕೆಂದು ವಿಚಾರಿಸಿದರು. ಆದರೆ ಮೊದಲು ದೇಶವು ಸ್ವತಂತ್ರವಾಗಬೇಕು. ಸ್ವತಂತ್ರ ಭಾರತಕ್ಕೆ ಸ್ವತಂತ್ರ ಶಿಕ್ಷಣ ರೂಪಿಸಲು ಯೋಗ್ಯವಾದೀತು ಎಂದು ತಿಳಿದು ಸ್ವಾತಂತ್ರ್ಯದ ಕಹಳೆಯನ್ನೂದಲಾಯಿತು. ಭಾರತಕ್ಕೆ ಅನುಗುಣವಾದ ರೀತಿಯಲ್ಲಿ ಅಸಹಕಾರ, ಅಹಿಂಸಾಮಯ ಆಂದೋಲನವು ಪ್ರಾರಂಭಿಸಲ್ಪಟ್ಟಿತು. ಇದಕ್ಕೂ ಪೂರ್ವದಲ್ಲಿ ೧೮೨೪ ರ ಸಮಯದಲ್ಲಿ ಕರ್ನಾಟಕದಲ್ಲಿ ಕಿತ್ತೂರ ರಾಣಿ ಚೆನ್ನಮ್ಮನು ಸ್ವಾತಂತ್ರ್ಯ ಸಮರದ ನಾಂದಿಯನ್ನು ಹಾಕಿದ್ದಳು; ಅನಂತರ ೧೮೫೭ ರಲ್ಲಿ ಭಾರತದ ಪ್ರಥಮ ಸ್ವಾತಂತ್ರ್ಯ ಯುದ್ಧವಾಯಿತು. ಮುಂದೆ

ಲೋಕಮಾನ್ಯ ಟಿಳಕರು "ಸ್ವಾತಂತ್ರ್ಯವು ಪ್ರತಿಯೊಬ್ಬ ಭಾರತೀಯನ ಜನ್ಮಸಿದ್ಧ ಹಕ್ಕು" ಎಂದು ಘೋಷಿಸಿದರು. ಬಳಿಕ ಮಹಾತ್ಮಾ ಗಾಂಧಿಯವರ ನೇತೃತ್ವದಲ್ಲಿ ಸ್ವಾತಂತ್ರ್ಯ ಚಳುವಳಿಯು ಪ್ರಬಲವಾಗಿ ೧೯೪೭ ರಲ್ಲಿ ದೇಶವು ಸ್ವತಂತ್ರವಾಯಿತು.

ಭಾರತವು ಸ್ವತಂತ್ರವಾಗುವ ಕೆಲವು ವರ್ಷಗಳ ಮೊದಲು ದೇಶದಲ್ಲಿ ಅಲ್ಲಲ್ಲಿ ರಾಷ್ಟ್ರೀಯ ಶಾಲೆಗಳು ಸ್ಥಾಪಿಸಲ್ಪಟ್ಟಿದ್ದವು. ಅವು ತಮ್ಮದೇ ಆದ ರೀತಿಯಲ್ಲಿ ರಾಷ್ಟ್ರೀಯ ಅಭಿಮಾನವನ್ನು ಕುದುರಿಸುವ ಕ್ರಮವನ್ನು ಅನುಸರಿಸುತ್ತಿದ್ದವು. ಮುಂದೆ ೧೯೩೭ ರಲ್ಲಿ ಕಾಂಗ್ರೆಸ್ ಮಂತ್ರಿಮಂಡಲಗಳಿದ್ದ ಪ್ರಾಂತಗಳಲ್ಲಿ ಮಹಾತ್ಮಾ ಗಾಂಧಿಯವರಿಂದ ರೂಪಿತವಾದ ಜೀವನ ಶಿಕ್ಷಣವು ಕಾರ್ಯರೂಪಕ್ಕಿಳಿಸಲ್ಪಟ್ಟಿತು. "ದೇಶವು ಸ್ವತಂತ್ರವಾದ ಬಳಿಕ ಅದು ಭಾರತದಲ್ಲೆಲ್ಲ ಬಳಕೆಯಲ್ಲಿ ಬಂದಿತು. ಅದು ಜೀವನದ ಸಲುವಾಗಿ ಜೀವನದ ಮುಖಾಂತರವಾದ ಶಿಕ್ಷಣವಾಗಿದೆ; ಮೂಲೋದ್ಯೋಗಗಳ ಮುಖಾಂತರ ಕೊಡಲ್ಪಡುತ್ತದೆ; ಅದು ಮಾತೃ ಭಾಷೆಯ ಮಾಧ್ಯಮದಿಂದ ಸಾಗುವ ಕ್ರಮವಾಗಿದೆ; ರಾಷ್ಟ್ರೀಯ ಧೋರಣೆಯಿಂದ ಕೂಡಿದೆ; ಸ್ವಯಂಪೂರ್ಣತೆ, ಸ್ವಾವಲಂಬನೆ, ಶ್ರಮಗೌರವಕ್ಕೆ ಪ್ರಾಧಾನ್ಯವನ್ನೀಯಲಾಗಿದೆ; ಆರ್ಥಿಕ, ಶಾರೀರಿಕ, ನೈಸರ್ಗಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಪರಿಸರಗಳ ಮುಖಾಂತರ ಶಿಕ್ಷಣವನ್ನೀಯುವಂಥದಾಗಿದೆ; ಜೀವನದ ಐದು ಮೂಲಭೂತ ಆವಶ್ಯಕತೆಗಳಾದ

ಆಹಾರ, ಆಚ್ಛಾದನ, ಆಶ್ರಯ, ಆರೋಗ್ಯ ಮತ್ತು ಅರಿವುಗಳನ್ನು ಪ್ರೇರೈಸುವಂಥದ್ದಾಗಿದೆ. ಆದರೆ ಈ ಶಿಕ್ಷಣವು ಹಲವಾರು ಕಾರಣಗಳಿಂದ ಅಷ್ಟು ಯಶಸ್ವಿಯಾಗಲಿಲ್ಲವೆಂದು ಹೇಳಬಹುದು. ಈ ಅಯಶಸ್ಸಿನ ಕಾರಣಗಳನ್ನು ಹೇಳುವುದು ಇಲ್ಲಿ ಅಪ್ರಸ್ತುತ.

ಮುಂದೆ ಕೇಂದ್ರ ಸರಕಾರವು ಡಾ.ರಾಧಾಕೃಷ್ಣನ್ನರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ನೇಮಿಸಿತು; ಅದರಂತೆ ಡಾ. ಮುದಲಿಯಾರ, ಡಾ. ಡಿ. ಎಸ್. ಕೊಠಾರಿಯವರ ಹಿರಿಯತನದಲ್ಲಿ ಮತ್ತೆರಡು ಸಮಿತಿಗಳನ್ನು ನೇಮಿಸಲಾಯಿತು. ಈ ಸಮಿತಿಗಳ ಶಿಫಾರಸುಗಳನ್ನು ವಿಶ್ವವಿದ್ಯಾಲಯಗಳು ಹಾಗೂ ರಾಜ್ಯ ಸರಕಾರಗಳು ಸಂಪೂರ್ಣವಾಗಿ ಅನುಷ್ಠಾನಕ್ಕೆ ತರಬೇಕಾಗಿದೆ. ವಿಶ್ವವಿದ್ಯಾಲಯಗಳು ಸ್ವಾಯತ್ತ ಸಂಸ್ಥೆಗಳಾಗಿವೆ. ಶಿಕ್ಷಣವು ರಾಜ್ಯ ಸರಕಾರದ ವಶದಲ್ಲಿರುವ ಇಲಾಖೆಯಾಗಿದೆ.

ಒಟ್ಟಿನಲ್ಲಿ ಇಂದಿನ ಶಿಕ್ಷಣವು ಪುಸ್ತಕೀಯವಾಗಿದೆ; ಜೀವನಕ್ಕೆ ಹೊಂದಾಣಿಕೆಯಿಲ್ಲದಾಗಿದೆ; ನೌಕರಿ ಜೀವನವನ್ನು ಮಾತ್ರ ಸಾಗಿಸಲಿಕ್ಕೆ ತಕ್ಕುದಾಗಿದೆ; ಶ್ರಮಗೌರವ, ದುಡಿಮೆ, ವೃತ್ತಿಗೌರವಗಳಿಂದ ದೂರವಾಗಿದೆ; ನಿರುದ್ಯೋಗತನವನ್ನು ಹೆಚ್ಚಿಸುವಂಥದ್ದಾಗಿದೆ; ಸ್ವಯಂಪೂರ್ಣತೆ ಸ್ವಾವಲಂಬನದಿಂದ ವಿಮುಖವಾಗಿದೆ; ಬರಡು ಆತ್ಮಪ್ರತಿಷ್ಠೆ, ಅಹಂಭಾವಗಳನ್ನು

ಹುಟ್ಟಿಸುವಂಥದಾಗಿದೆ; ರಾಷ್ಟ್ರೀಯ ಪ್ರಜ್ಞೆಯನ್ನು ಹೆಚ್ಚಿಸಲು, ಮಕ್ಕಳ ಚಾರಿತ್ರ್ಯವನ್ನು ರೂಪಿಸಲು, ವ್ಯಕ್ತಿಯನ್ನು ಸಮಾಜದ ಉಪಯುಕ್ತ ಸದಸ್ಯನನ್ನಾಗಿಸಲು ಜನರಲ್ಲಿ ನಾಗರಿಕ ಹಾಗೂ ಸಾಮಾಜಿಕ ಪ್ರಜ್ಞೆಯನ್ನುಂಟು ಮಾಡಲು, ನಮ್ಮ ಸಂಸ್ಕೃತಿಯನ್ನು ಸಂರಕ್ಷಿಸಲು ಅಸಮರ್ಥವಾಗಿದೆ; ಗುರು-ಶಿಷ್ಯರಲ್ಲಿಯ ಮಧುರ ಬಾಂಧವ್ಯವನ್ನು ಅಲಕ್ಷಿಸಿದೆ.

ಹೀಗಿದ್ದರೂ ಇಂದಿನ ಶಿಕ್ಷಣಕ್ಕೆ ತನ್ನದೇ ಆದ ಸ್ಥಾನವಿಲ್ಲದಿಲ್ಲ. ಯಂತ್ರ ಯುಗದ ಇಂದಿನ ಕಾಲದಲ್ಲಿ ಮುಂದುವರಿದ ಅನೇಕ ಪಾಶ್ಚಾತ್ಯ ಹಾಗೂ ಜಪಾನದಂಥ ಕೆಲವು ಪೌರ್ವಾತ್ಯ ರಾಷ್ಟ್ರಗಳ ಮಾಲಿಕೆಯಲ್ಲಿ ನಮ್ಮ ದೇಶವೂ ಸೇರಬೇಕಾದರೆ ನಾವು ವೈಜ್ಞಾನಿಕ ಶಿಕ್ಷಣವನ್ನು ಪಡೆಯಲೇಬೇಕು. ಹಳೆಯ ಕಾಲದ ರೂಢಿ-ಪರಂಪರೆಗೆ ಅಂಟಿಕೊಂಡು ಕುಳಿತರೆ ನಾವು ಇನ್ನೂ ಬಹು ದೂರ ಉಳಿಯಬೇಕಾದೀತು. ಟೆಲಿಫೋನ ಟೆಲಿಗ್ರಾಫ್, ಟೆಲಿವ್ಹಿಜನ್, ಟೆಲಿಪ್ರಿಂಟರ್, ಟೆಲಿಸ್ಕೋಪ, ಆಕಾಶವಾಣಿ,ಆಕಾಶಯಾನ, ಸ್ಪುಟ್ನಿಕ್ - ಇವೇ ಮೊದಲಾದ ಸಂಶೋಧನೆಗಳು ಸಾಧಿಸಲ್ಪಟ್ಟ ಇಂದಿನ ವಿಜ್ಞಾನ ಯುಗದಲ್ಲಿ ಬಹುಕಾಲದ ಹಿಂದಿನ ಹಳೆಯ ವಿಷಯಗಳನ್ನೂ, ಹಳೆಯ ಪದ್ಧತಿಗಳನ್ನೂ, ಕಲಿಸುತ್ತ ಸಾಗಿದರೆ ಅದು ಸರಿಯಾಗದು. ಓಡುತ್ತಿರುವ ಜಗತ್ತಿನೊಡನೆ ನಾವೂ ಚಲಿಸಬೇಕಾಗುವುದು. ಸಂಶೋಧನೆಗಳನ್ನು ನಡೆಸಬೇಕಾಗುವದು. ಆದುದರಿಂದ ಇಂದಿನ ಶಿಕ್ಷಣ ಕ್ರಮದಲ್ಲಿ ವಿಜ್ಞಾನ ಶೋಧನೆಗೆ ಸ್ಥಾನವಿತ್ತುದ

ಮುಂದುವರಿದ ರಾಷ್ಟ್ರಗಳಲ್ಲಿ ನಡೆದ ಸಂಶೋಧನೆಗಳನ್ನು ಅರಿತು ಕೊಳ್ಳಲು ಆಸ್ಪದವಿತ್ತುದು ಯೋಗ್ಯವೆಂದೇ ಹೇಳಬಹುದು. ಆಧುನಿಕ ಶಿಕ್ಷಣ ಪದ್ಧತಿಯನ್ನು ಹೀಗೆ ಆಧುನಿಕೀಕರಣ ಗೊಳಿಸುವುದರ ಜೊತೆಗೆ ಅದರ ಮೂಲಭೂತ ಧ್ಯೇಯಗಳಾದ ವ್ಯಕ್ತಿತ್ವದ ವಿಕಾಸ, ವಿದ್ಯಾರ್ಥಿಗಳ ಚಾರಿತ್ರ್ಯದ ಬೆಳವಣಿಗೆ, ಸಾಮಾಜಿಕ ಸುಧಾರಣೆ, ವಿಶ್ವಬಂಧುತ್ವ ಮೊದಲಾದವುಗಳು ಸಾಧಿಸಲ್ಪಡುವಂತೆ ನೋಡಿಕೊಳ್ಳಬೇಕು. ಪ್ರಾಚೀನ ಶಿಕ್ಷಣ ಪದ್ಧತಿಯಲ್ಲಿರುವ ಒಳ್ಳೆಯ ಅಂಶಗಳನ್ನು ಅಂದರೆ ಗುರು-ಶಿಷ್ಯರಲ್ಲಿಯ ಮೃದು-ಮಧುರ ಬಾಂಧವ್ಯ, ಶೀಲ ಸಂವರ್ಧನೆ, ಶ್ರಮಗೌರವ, ಉದ್ಯೋಗ ಶೀಲತೆ, ಸಾಮಾಜಿಕ ಸೇವೆ, ಸಾದಾ ಜೀವನ, ಉಚ್ಚ ವಿಚಾರ, ಸ್ವದೇಶಾಭಿಮಾನ, ಸ್ವಯಂ ಪೂರ್ಣತೆ ಮೊದಲಾದವುಗಳನ್ನು ಇಂದಿನ ಶಿಕ್ಷಣ ಕ್ರಮದಲ್ಲಿ ಸಮನ್ವಯಗೊಳಿಸಬೇಕು. ಹಳೆಯದರಲ್ಲಿ ಇರುವ ಈ ಒಳ್ಳೆಯ ಅಂಶಗಳನ್ನೂ ಇಂದಿನ ಶಿಕ್ಷಣಕ್ರಮದಲ್ಲಿರುವ ಪ್ರಗತಿಪರ ಹಾಗೂ ವಿಧಾಯಕ ಅಂಶಗಳನ್ನೂ ಬಂಧುರಗೊಳಿಸಿ ಹೊಸ ಶಿಕ್ಷಣ ಕ್ರಮವನ್ನು ರೂಪಿಸಬೇಕು. ಹೀಗೆ ರೂಪಿಸುವಾಗ ಇನ್ನೊಂದು ಮಹತ್ವದ ಅಂಶವನ್ನು ಸ್ಮರಣೆಯಲ್ಲಿಟ್ಟುಕೊಳ್ಳಬೇಕಾಗುವುದು. ಅದುವೇ ಸಂಸ್ಕೃತಿ.

೫. ಸಂಸ್ಕೃತಿಯೆಂದರೇನು ?

ವ್ಯಕ್ತಿಯ ಆಚಾರ-ವಿಚಾರಗಳಿಂದ; ಇರುವಿಕೆಯಿಂದ, ಜೀವನ ಕ್ರಮದಿಂದ ಅಭಿವ್ಯಕ್ತವಾಗುವ ರೀತಿ-ನೀತಿಗೆ ಸಂಸ್ಕೃತಿಯೆನ್ನಬಹುದು. ಸಂಸ್ಕೃತಿಯು ಅಲ್ಪಾವಧಿಯಲ್ಲಿ ಉದಯಿಸುವಂತಹದಲ್ಲ. ಯಾವುದೊಂದು ಸಮಾಜವಾಗಲಿ, ರಾಷ್ಟ್ರವಾಗಲಿ ನೂರಾರು ಸಾವಿರಾರು ವರ್ಷಗಳ ಕಾಲಾವಧಿಯಲ್ಲಿ ಕೆಲವೊಂದು ತತ್ತ್ವಗಳನ್ನು ಪ್ರಸ್ಥಾಪಿಸಿಕೊಂಡು ಸಮಾಜಕ್ಕೂ, ರಾಷ್ಟ್ರಕ್ಕೂ ಕಲ್ಯಾಣಕರವಾದ ಒಂದು ಸತ್ಪರಂಪರೆಯನ್ನು ಹಾಕುತ್ತದೆ. ಇಂಥ ಪರಂಪರೆಗೆ ಆ ಜನಾಂಗದ ಇಲ್ಲವೆ ರಾಷ್ಟ್ರದ ಸಂಸ್ಕೃತಿ ಅನ್ನುತ್ತಾರೆ. ಸಂಸ್ಕೃತಿಯನ್ನು ಒಂದು ಜೇನುಗೂಡಿಗೆ ಹೋಲಿಸಬಹುದು. ಅನೇಕ ಜೇನ್ನೊಣಗಳು ಹಲವು ಬಗೆಯ ಹೂಗಳಿಂದ ಮಕರಂದವನ್ನು ಹೀರಿಕೊಂಡು, ಎಷ್ಟೋ ದಿನಗಳ ಪರ್ಯಂತ ಪರಿಶ್ರಮಪಟ್ಟು ಜೇನು ಗೂಡನ್ನು ಕಟ್ಟಿ ಮಧುರವಾದ ಮಧುವನ್ನು ಸಂಗ್ರಹಿಸುವಂತೆ ಒಂದು ಸಮಾಜದ ಇಲ್ಲವೆ ಜನಾಂಗದ ಇಲ್ಲವೆ ರಾಷ್ಟ್ರದ ಜನರು ತಮ್ಮ ಜೀವನಾನುಭವಗಳಿಂದ ತಮ್ಮ ಸಮಾಜಕ್ಕೂ, ಜನಾಂಗಕ್ಕೂ, ರಾಷ್ಟ್ರಕ್ಕೂ ಅದೇಕೆ, ಇಡೀ ಮಾನವ ಕುಲಕ್ಕೇ ಕಲ್ಯಾಣಕರವಾದ ರೀತಿ-ನೀತಿಗಳನ್ನೂ,

ತತ್ತ್ವಗಳನ್ನೂ, ಸಂಪ್ರದಾಯಗಳನ್ನೂ ಪ್ರಸ್ಥಾಪಿಸುತ್ತಾರೆ. ಇಂಥ ರೀತಿ-ನೀತಿಗಳ, ತತ್ವಗಳ ಮತ್ತು ಸಂಪ್ರದಾಯಗಳ ತ್ರಿವೇಣಿ ಸಂಗಮಕ್ಕೆ ಸಂಸ್ಕೃತಿ ಎಂದು ಕರೆಯಬಹುದು.

ಜೀವನವನ್ನು ಒಂದು ಕುಸುಮಕ್ಕೆ ಹೋಲಿಸಿದರೆ ಸಂಸ್ಕೃತಿಯನ್ನು ಅದರ ಸುವಾಸನೆಗೆ ಹೋಲಿಸಬಹುದು. ಸಕ್ಕರೆಯಲ್ಲಿ ಸಿಹಿಯು ಅಡಗಿದಂತೆ ಒಳ್ಳೆಯ ಜನಾಂಗದ ಜೀವನ ಕ್ರಮದಲ್ಲಿ ಅದರ ಸಂಸ್ಕೃತಿಯು ಅಡಗಿರುತ್ತದೆ. ಸಂಸ್ಕೃತಿಯ ಮಟ್ಟವು ಹೆಚ್ಚಿದಂತೆ ಆ ಜನಾಂಗದ ಇಲ್ಲವೆ ದೇಶದ ಘನತೆಯು ಹೆಚ್ಚುತ್ತದೆ. ತನಗೂ, ಪರರಿಗೂ ಆನಂದವನ್ನುಂಟು ಮಾಡುವುದು ಸಂಸ್ಕೃತಿಯ ಮುಖ್ಯ ಗುರಿ. ಸರ್ವರಿಗೂ ಆನಂದವನ್ನು ಉಂಟು ಮಾಡುವ ಗುಣವು ಯಾರೊಬ್ಬರಲ್ಲಿ ಉದಯಿಸಬೇಕಾದರೆ ಅವನು ಹಲವಾರು ವರ್ಷಗಳ ಪ್ರಯತ್ನದಿಂದ ಒಂದು ಬಗೆಯ ಹೊಂದಾಣಿಕೆಯನ್ನೂ, ಹಿರಿಯತನವನ್ನೂ ಸಂಪಾದಿಸುತ್ತಾನೆ. ಈ ಹೊಂದಾಣಿಕೆ ಹಾಗೂ ಹಿರಿಯತನಗಳ ಸಂಗಮದ ಮನೋಭಾವವೇ ಸಂಸ್ಕೃತಿಯೆನಿಸುವುದು. ಮನೋನಿಗ್ರಹ, ದಯೆ, ತ್ಯಾಗಗಳಿಂದ ಕೂಡಿ ಜೀವನವನ್ನು ನಯವಾಗಿ ಸಾಗಿಸಿಕೊಂಡುಹೋಗುವದು ಸಂಸ್ಕೃತಿ.

ಮನುಷ್ಯನಿಗೆ ಜೀವಿಸಲಿಕ್ಕೆ ಹಣವು ಅವಶ್ಯ. ಅವನು ಅದನ್ನು ಸತ್ಯ ಹಾಗೂ ಪ್ರಾಮಾಣಿಕತನದಿಂದ ಗಳಿಸಬೇಕು. ಅದರಂತೆ ಅವನು ಧರ್ಮದಿಂದ ನಡೆಯಲೇಬೇಕು; ಧರ್ಮವನ್ನು

ರಕ್ಷಿಸಬೇಕು. 'ಧರ್ಮವನ್ನು ನಾವು ರಕ್ಷಿಸಿದರೆ ಧರ್ಮವು ನಮ್ಮನ್ನು ರಕ್ಷಿಸುತ್ತದೆ.' ಅದೇ ತೆರನಾಗಿ, ಮನುಷ್ಯನು ಪ್ರಗತಿಪಥದಲ್ಲಿ ಸಾಗಬೇಕಾದರೆ ಅವನಲ್ಲಿ ಸದಿಚ್ಛೆಗಳಿರಬೇಕು. ಹೀಗೆ ಅರ್ಥ, ಧರ್ಮ, ಇಚ್ಛೆ ಇವು ಮಾನವನ ಹಸನಾದ ಜೀವನಕ್ಕೆ ಅವಶ್ಯವಾದುದರಿಂದ ಇವುಗಳನ್ನು ಸಮನ್ವಯಗೊಳಿಸಿ ಸನ್ಮಾರ್ಗದಲ್ಲಿ ಜೀವನವನ್ನು ಸಾಗಿಸುವುದಕ್ಕೆ ಸಂಸ್ಕೃತಿಯೆನ್ನುವರು. ಸಂಸ್ಕೃತಿಯು ನಮ್ಮ ಆಚರಣೆಯಲ್ಲಿ, ರೀತಿ-ನೀತಿಯಲ್ಲಿ ಗೋಚರವಾಗುತ್ತದೆ. ಹಲವಾರು ವರ್ಷಗಳ ನಡವಳಿಕೆಯಿಂದ ಸಮಾಜಕ್ಕೆ ಒಂದು ಬಗೆಯ ಸಂಸ್ಕಾರವು ಲಭಿಸುವುದು. ಈ ಸಂಸ್ಕಾರವೇ ಸಂಸ್ಕೃತಿಯೆನಿಸುವುದು.

'ಸಂಸ್ಕೃತಿ' ಇದಕ್ಕೆ ಆಂಗ್ಲ ಭಾಷೆಯಲ್ಲಿ 'Culture' ಅನ್ನುವರು. ವ್ಯಕ್ತಿಯು ಸಭ್ಯನಾಗಿರಬೇಕು; ನಾಗರಿಕ ಪ್ರಜ್ಞೆಯುಳ್ಳವನಿರಬೇಕು; ವಿನಯಶೀಲನಾಗಿರಬೇಕು, ಬೇರೆಯವರಲ್ಲಿಯ ಸದ್ಗುಣಗಳನ್ನು ಕಂಡುಹಿಡಿದು ಅವುಗಳನ್ನು ಪ್ರಶಂಸಿಸುವ ಮನೋಭಾವವುಳ್ಳವನಾಗಿರಬೇಕು; ಉಪಕಾರ ಮಾಡಿದವರನ್ನು ಸ್ಮರಿಸಬೇಕು; ರಸಿಕನಾಗಿರಬೇಕು; ಸ್ವತಂತ್ರ ವಿಚಾರ ಮಾಡುವ ಶಕ್ತಿಯುಳ್ಳವನಾಗಿರಬೇಕು; ಪರರ ಇಂಗಿತವನ್ನು ಅರಿತುಕೊಳ್ಳುವ ಜಾಣ್ಮೆಯಿಂದ ಕೂಡಿರಬೇಕು; ಕರ್ತವ್ಯದಕ್ಷನಿರಬೇಕು. ಸತ್ಯಸಂಧನೂ ಗುರುಭಕ್ತಿಯುಳ್ಳವನೂ, ದೇಶಾಭಿಮಾನಿಯೂ, ತ್ಯಾಗಿಯೂ, ಶುಚಿತ್ವವುಳ್ಳವನೂ, ಸ್ನೇಹಪರನೂ ಆಗಿರಬೇಕು. ಹೀಗಿರುವ ವ್ಯಕ್ತಿಗೆ ಸುಸಂಸ್ಕೃತ

ನೆಂದು ಕರೆಯಬಹುದು. ಯಾವದೇ ಜನಾಂಗದ ಸಂಸ್ಕೃತಿಯನ್ನು ಆ ಜನಾಂಗದಲ್ಲಿ ಅಭಿವ್ಯಕ್ತವಾಗುವ ತಿಳಿವು, ಅರಿವು ನಡವಳಿಕೆಗಳಿಂದ ತಿಳಿದುಕೊಳ್ಳಬಹುದು. ಯಾವುದೊಂದು ದೇಶದ ಸಂಸ್ಕೃತಿಯನ್ನು ಆ ದೇಶದಲ್ಲಿರುವ ವ್ಯಕ್ತಿಗಳ, ಕುಲಗಳ ಹಾಗೂ ಗುಂಪುಗಳ ಪದ್ಧತಿಗಳಿಂದ, ಆಚಾರಗಳಿಂದ, ನಂಬಿಕೆಗಳಿಂದ ತಿಳಿದುಕೊಳ್ಳಬಹುದು. ಸಂಸ್ಕೃತಿಯು ಹಿರಿಯರಿಂದ ಕಿರಿಯರಿಗೆ ಸಾಗಿಬರುತ್ತದೆ; ಮೂಲದಲ್ಲಿ ಸಣ್ಣದೂ, ಸುಲಭವೂ ಇದ್ದ ಅದು ಕಾಲವು ಗತಿಸಿದಂತೆ, ಪರಿಸ್ಥಿತಿಗನುಸರಿಸಿ ವಿಶಾಲವೂ ಗೂಢವೂ ಆಗುತ್ತ ಎಲ್ಲ ನಾಗರಿಕ ಸಮಾಜದ ಮೇಲೆ ತನ್ನ ಪ್ರಭಾವವನ್ನು ಬೀರುತ್ತದೆ. ಇದರಲ್ಲಿಯೇ ಅದರ ಅವ್ಯಕ್ತ ಶಕ್ತಿಯು ಹುದುಗಿದೆ.

ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ |
ತನ್ನ ಬಣ್ಣಿಸಬೇಡ, ಇದಿರು ಹಳಿಯಲು ಬೇಡ ||
ಇದೇ ಅಂತರಂಗದ ಶುದ್ಧಿ, ಇದೇ ಬಹಿರಂಗದ ಶುದ್ಧಿ |
ಇದೇ ನಮ್ಮ ಕೂಡಲಸಂಗನನೊಲಿಸುವ ಪರಿ ||

ಎಂಬ ವಚನದಲ್ಲಿ ಮಹಾತ್ಮಾ ಬಸವಣ್ಣನವರು ಸಂಸ್ಕೃತಿಯ ಸಾರವನ್ನೇ ನಿರೂಪಿಸಿದ್ದಾರೆ. ಜೀವನದ ಕಷ್ಟ-ಕಾರ್ಪಣ್ಯಗಳನ್ನೂ, ತೊಡಕು-ತೊಂದರೆಗಳನ್ನೂ ಹದವರಿತ ಮನಸ್ಸಿನಿಂದ ಪರಿಶೀಲಿಸಲು ಕಲಿಯಬೇಕು. ಹೀಗೆ ಕಲಿತಾಗ ಮಾತ್ರ ನಿಜವಾದ ಸಂಸ್ಕೃತಿಯು ಲಭ್ಯವಾಗುತ್ತದೆ.

ಪ್ರತಿಯೊಬ್ಬನಲ್ಲಿ ದೈವೀ ಚೈತನ್ಯವಿರುತ್ತದೆಂದು ಬಲ್ಲವರು ಹೇಳುತ್ತಾರೆ. ಆ ದೇವೀಚೈತನ್ಯದ ಅರ್ಥ ಮಾಡಿಕೊಳ್ಳಬೇಕು; ಆದರಂತೆ ಅದರ ಮೇರೆವರಿಯದ ವ್ಯಾಪ್ತಿಯನ್ನೂ ಅರ್ಥ ಮಾಡಿಕೊಳ್ಳಬೇಕು. (ಹೀಗೆ ಅರ್ಥ ಮಾಡಿಕೊಂಡು) ಆ ಚೈತನ್ಯ ಪ್ರಸರಣದಲ್ಲಿ ನಿರತನಾಗುವುದೇ ಸಂಸ್ಕೃತಿ. ಸುಸಂಸ್ಕೃತನು ತನ್ನ ಜೀವನದ ಗುರಿ ಯಾವುದಿರಬೇಕು ಎಂದು ನಿರ್ಧರಿಸಿಕೊಂಡು ಆ ಗುರಿ ಸಾಧನೆಯತ್ತ ಸಾಗುತ್ತಾನೆ. ಸತ್ಪಥದಲ್ಲಿ ಸಾಗಿ ಮತ್ತು ಒಳ್ಳೆಯ ಸಾಧನಗಳಿಂದ ಈ ಗುರಿ ಸಾಧನೆಯನ್ನು ಮಾಡಿಕೊಳ್ಳುತ್ತಾನೆ. ಸುಸಂಸ್ಕೃತ ಸಮಾಜ ಹಾಗೂ ರಾಷ್ಟ್ರಗಳು ಸಹ ತಮ್ಮ ಗುರಿಗಳನ್ನು ಇದೇ ಬಗೆಯಾಗಿ ಹಾಗೂ ಅನ್ಯ ಸಮಾಜಗಳಿಗೆ ಹಾಗೂ ರಾಷ್ಟ್ರಗಳಿಗೆ ಬಾಧಕವಾಗದ ರೀತಿಯಲ್ಲಿ ಸಾಧಿಸಿಕೊಳ್ಳುತ್ತವೆ.

ಮಾನವನು ತನ್ನ ಮನಸ್ಸನ್ನು ಪರಿಪಕ್ವಗೊಳಿಸಬೇಕು; ಅಂದರೆ ಮಾತ್ರ ಒಳಿತು–ಕೆಡಕುಗಳನ್ನು ವಿಂಗಡಿಸಲು ಅವನು ಸಮರ್ಥನಾಗುವನು. ಈ ಪರಿಪಕ್ವತೆಯು ಆಧ್ಯಾತ್ಮ ಹಾಗೂ ಒಳ್ಳೆಯ ಸಾಹಿತ್ಯಾಭ್ಯಾಸದಿಂದ, ಸಜ್ಜನರ ಸಹವಾಸದಿಂದ ಮಹಾಮುನಿಮರ ಪುರಾಣ ಶ್ರವಣದಿಂದ ಲಭಿಸುವುದು. ಹೀಗೆ ಪರಿಪಕ್ವವಾದ ಅಂದರೆ ಸಂಪೂರ್ಣವಾಗಿ ಹದಗೊಳಿಸಲ್ಪಟ್ಟ ಮನಸ್ಸುಳ್ಳವನೇ ಸುಸಂಸ್ಕೃತನೆಂದೆನಿಸುವನು. ಸುಸಂಸ್ಕೃತವಾದ ಮನಸ್ಸು ಬೇಡಿದುದನ್ನು ಕೊಡಬಲ್ಲುದು. ಸುಸಂಸ್ಕೃತ ಕೃತಿಗಳು ಸಕಲರಿಗೂ ಕಲ್ಯಾಣವನ್ನುಂಟು ಮಾಡುತ್ತವೆ.

ಅಂತರಂಗದ ಮಾಧುರ್ಯವನ್ನೂ, ಮನಸ್ಸಿನ ಪಾವಿತ್ರ್ಯವನ್ನೂ, ಆತ್ಮದ ಶಕ್ತಿಯನ್ನೂ, ಸೃಷ್ಟಿಸುವುದೇ ಸಂಸ್ಕೃತಿ. ಪವಿತ್ರಮನಸ್ಕರೂ, ಮೃದು-ಮಧುರ ಭಾವನೆಗಳಿಂದ ಕೂಡಿದವರೂ, ಆತ್ಮ ಬಲವನ್ನು ಹೊಂದಿದವರೂ ಸುಸಂಸ್ಕೃತರೆನ್ನಿಸಿಕೊಳ್ಳುವರು. ಇಂಥ ಜನರಿಂದ ಕೂಡಿದ ಸಮಾಜ ಹಾಗೂ ದೇಶಗಳು ಸಂಸ್ಕೃತಿಯುಳ್ಳವುಗಳು ಎಂದು ಕರೆಯಿಸಿಕೊಳ್ಳುತ್ತವೆ. ಇಂಥ ಸಮಾಜಗಳು ಹಾಗೂ ರಾಷ್ಟ್ರಗಳು ಮಾತ್ರ ವಿಶ್ವದಲ್ಲಿ ಚಿರಶಾಂತಿಯನ್ನು ಸ್ಥಾಪಿಸಬಲ್ಲವು.

ಸಾತ್ವಿಕ ಜೀವನದ ರೀತಿಗೆ ಸಂಸ್ಕೃತಿಯೆನ್ನುತ್ತಾರೆ. ಅದು ಜನಜೀವನದ ಎಲ್ಲ ಕ್ಷೇತ್ರಗಳಿಗೂ ಪಾವಿತ್ರ್ಯವನ್ನು ಕೊಡುತ್ತದೆ; ಮಾನವನ ಘನತೆ, ಗೌರವಗಳನ್ನು ಹೆಚ್ಚಿಸುತ್ತದೆ ಅವನನ್ನು ತೇಜಸ್ವಿಯನ್ನಾಗಿಯೂ, ಧರ್ಮಾತ್ಮನನ್ನಾಗಿಯೂ ಮಾಡುತ್ತದೆ. ಇದೇ ತೆರನಾಗಿ ಸುಸಂಸ್ಕೃತ ಸಮಾಜ ಹಾಗೂ ರಾಷ್ಟ್ರಗಳು ಘನತೆಯನ್ನೂ, ಗಾಂಭೀರ್ಯವನ್ನೂ, ತೇಜಸ್ಸನ್ನೂ ಧಾರ್ಮಿಕತೆಯನ್ನೂ ಪಡೆಯುತ್ತವೆ. ಸಂಸ್ಕೃತಿಯು ಜನಾಂಗದ ಜೀವನವನ್ನು ಮಾರ್ಪಡಿಸಬಲ್ಲದು. ಕಾಲಚಕ್ರದ ಉರುಳಾಟದಲ್ಲಿ ಪರಿಪಕ್ವಗೊಂಡ ಜನಾಂಗ ಹೃದಯದ ಸದಾವಿಷ್ಕರಣಕ್ಕೆ ಸಂಸ್ಕೃತಿಯೆನುತ್ತಾರೆ, ಸಂಸ್ಕೃತಿಯು ನಾಡವರ ಸಭ್ಯತೆಯನ್ನೂ, ಶೀಲವನ್ನೂ, ಚಾರಿತ್ರ್ಯವನ್ನೂ ವ್ಯಕ್ತಪಡಿಸುವ ಸಂವೇದನಾಭಾವವಾಗಿದೆ.

ಸಂಸ್ಕೃತಿ ವಾಹಕಗಳು

ಹಿರಿಯರಿಂದ ಚಿಕ್ಕವರಿಗೆ ಸಂಸ್ಕೃತಿಯು ಸಾಗಿಬರುತ್ತದೆ. ಅದನ್ನು ಯಾರೂ ಕಲಿಸಬೇಕಾಗಿಲ್ಲ. ಮನೆಯಲ್ಲಿಯ ಹಿರಿಯರ ಜೀವನ ಕ್ರಮವನ್ನೂ, ಆಚಾರ-ವಿಚಾರಗಳನ್ನೂ ಚಿಕ್ಕವರು ದಿನಂಪ್ರತಿ ನೋಡುತ್ತಾರೆ. ಹಿರಿಯರೆಂದರೆ ಚಿಕ್ಕವರಿಗೆ ಮಾರ್ಗ ದರ್ಶಕರು. ಹಿರಿಯರು ಮಾಡುವುದೆಲ್ಲ ಒಳ್ಳೆಯದು; ಅವರು ಆಡುವುದೆಲ್ಲ ಶ್ರೇಷ್ಠ; ಅವರ ಉಡಿಗೆ-ತೊಡಿಗೆಗಳೆಲ್ಲ ಉತ್ತಮ. ಒಟ್ಟಿನಲ್ಲಿ ಅವರ ಬದುಕು ಬಂಗಾರವೆಂಬ ಭಾವನೆ ಚಿಕ್ಕವರಿಗಿರುವುದು ಸ್ವಾಭಾವಿಕ. ಅನುಕರಣ ಪ್ರವೃತ್ತಿಯು ಪ್ರಾಧಾನ್ಯವನ್ನು ಪಡೆದ ಚಿಕ್ಕವರು ಹಿರಿಯರ ಎಲ್ಲ ರೀತಿ ನೀತಿಗಳನ್ನು ಅನುಕರಣ ಮಾಡುವರು. ಬೇಗ ಮಲಗುವದು; ಬೇಗ ಏಳುವುದು; ಸ್ನಾನ; ಪೂಜೆ ತೀರಿಸಿಯೇ ಊಟ ಮಾಡುವುದು; ಮನೆಗೆ ಬಂದ ಅತಿಥಿಗಳನ್ನು ಮೃದು ವಚನಗಳಿಂದ ಸತ್ಕರಿಸುವುದು; ಸತತ ದುಡಿಮೆಯಿಂದ ಕೂಡಿರುವುದು ಇವೇ ಮೊದಲಾದ ಕ್ರಮಗಳಿಂದ ಕೂಡಿದ ಒಂದು ಮನೆಯಲ್ಲಿಯ ಬಾಲಕ ಬಾಲಕಿಯರು ಸಹ ಅದೇ ರೀತಿ ಪರಂಪರೆಯನ್ನು ತೀಡುವರು. ಹೀಗೆ ಆ ಮನೆತನದ ಸಂಸ್ಕೃತಿಯು ಅವ್ಯಕ್ತವಾಗಿ ಅವರ

ಆಚರಣೆಯಲ್ಲಿ ಬಂದು ಬಿಡುವುದು; ಅವರಲ್ಲಿ ರಕ್ತಗತವಾಗುವುದು.

ಸಂಸ್ಕೃತಿಯು ಹಿರಿಯರಿಂದ ಸಣ್ಣವರಿಗೆ ಇಳಿದು ಬರುವಂತೆ ಯಾವುದೊಂದು ಮನೆತನದ ಇಲ್ಲವೆ ಸಮಾಜದ ಮುಂದಿನ ಪೀಳಿಗೆಗೂ ಇಳಿದು ಬರುತ್ತದೆ. ಈ ರೀತಿಯಿಂದ ನೋಡಿದರೆ ಸುಸಂಸ್ಕೃತಿಯು ಆನುವಂಶಿಕವೆಂದೇ ಹೇಳಬೇಕಾಗುತ್ತದೆ. ಒಳ್ಳೆಯ ಸಂಸ್ಕೃತಿಯುಳ್ಳ ಮನೆನತದಲ್ಲಿ ಹುಟ್ಟಿದವರು ಸುಸಂಸ್ಕೃತರಿರುವುದನ್ನು ಕಾಣುತ್ತೇವೆ.

ಸಂಸ್ಕೃತಿಯು ಮನುಷ್ಯ ಜೀವಿಗಳಿಗೆ ಅಷ್ಟೇ ಏಕೆ, ಆಯಾ ಮನೆತನದಲ್ಲಿರುವ ಇತರ ಬುದ್ಧಿವಂತ ಪ್ರಾಣಿ-ಪಕ್ಷಿಗಳಿಗೆ ಸಹ ಹರಿದು ಹೋಗುವುದನ್ನು ಕೇಳಿಲ್ಲವೇ? ಇಲ್ಲಿ ಪರಿಸರವು ವಾಹಕವಾಗುತ್ತದೆ. ಅಣ್ಣ-ತಮ್ಮಂದಿರಾದ ಎರಡು ಗಿಳಿಮರಿಗಳನ್ನು ಬೇಡನೊಬ್ಬನು ತಂದು, ಒಂದನ್ನು ಒಬ್ಬ ಕಟುಕನಿಗೂ ಇನ್ನೊಂದನ್ನು ಒಂದು ಮಠದ ಸ್ವಾಮಿಗಳಿಗೂ ಕೊಟ್ಟನಂತೆ. ಕಟುಕನ ಮನೆಯಲ್ಲಿ ಬೆಳೆದ ಗಿಳಿ ಮರಿಯು ಆ ಮನೆಯಲ್ಲಿ ದಿನವೂ ಕೇಳುವ ಬಡಿ, ಹೊಡಿ, ಕಡಿ, ಕೊಲ್ಲು ಇತ್ಯಾದಿ ಕೆಟ್ಟ ಶಬ್ದಗಳನ್ನೇ ಕಲಿಯಿತಂತೆ. ಮಠದಲ್ಲಿ ಬೆಳೆದ ಗಿಳಿ ಮರಿಯು ಅಲ್ಲಿ ಕೇಳಿ ಬರುವ ಅಯ್ಯಾ ಬನ್ನಿರಿ; ಕುಳ್ಳಿರಿ; ಹದುಳವಾಗಿರುವಿರಾ? ಇತ್ಯಾದಿ ಮೃದು ವಚನಗಳನ್ನು ಕಲಿಯಿತಂತೆ ಇದರರ್ಥವೇನು? ಆಯಾ ಸ್ಥಳಗಳಲ್ಲಿ ಇದ್ದ ಪರಿಸರದ ಪರಿಣಾಮದಿಂದ ಪ್ರಸ್ಥಾಪಿತ

ವಾದ ಸಂಸ್ಕೃತಿಯು ಆಯಾ ಗಿಳಿ ಮರಿಗಳ ಮೇಲೆ ವಿವಿಧ ಬಗೆಯ ಪರಿಣಾಮವನ್ನುಂಟು ಮಾಡಿತು. ಅವು ಆಯಾ ಸಂಸ್ಕೃತಿಯನ್ನೇ ಪ್ರತಿಬಿಂಬಿಸಿದವು.

ಎರಡನೆಯದಾಗಿ ಪರಿಸ್ಥಿತಿಯ ಪ್ರಭಾವವು ಸಂಸ್ಕೃತಿಯ ಮಹತ್ವದ ವಾಹಕವಾಗಿದೆ. ಪರಂಪರೆಯಿಂದ ಬಂದ ಸಂಸ್ಕೃತಿಗೆ ಒಳಗಾದ ಮನೆತನಗಳು ಕಾರಣಾಂತರದಿಂದ ಬಡತನದ ಬೇಗುದಿಗೆ ಸಿಕ್ಕು ಬೆಂಡಾದಾಗ ಜೀವನ ನಿರ್ವಹಣೆಯ ಬಗೆಗೆ ತೊಳಲಾಡಬೇಕಾಗುತ್ತದೆ. ಈ ಮನೆತನಗಳಿಗೆ ಸಂಬಂಧಿಸಿದ ಇತರಮನೆತನದವರು, ಆಪ್ತೇಷ್ಟರು ಹಾಗೂ ಸಮಾಜದವರು ಆ ಮನೆತನಗಳನ್ನು ಹೇಯದಿಂದ ಕಾಣಬಹುದು. ಇಂಥ ದಾರುಣ ಸ್ಥಿತಿಯಲ್ಲಿ ಜೀವನ್ಮರಣದ ಹೋರಾಟದಲ್ಲಿದ್ದ ಆ ಕುಟುಂಬಗಳಿಗೆ ಬೇರೆ ಮತದವರು, ವಿಭಿನ್ನ ಸಂಸ್ಕೃತಿಯವರು ಸಹಾಯ–ಸಹ ಕಾರವನ್ನು ಸಲ್ಲಿಸಿ ಆ ಕುಟುಂಬಗಳನ್ನು ಉನ್ನತ ಸ್ಥಿತಿಗೆ ಒಯ್ದರೆ ಆ ಮನೆತನಗಳು ಸ್ವಾಭಾವಿಕವಾಗಿ ಆ ಬೇರೆ ಸಂಸ್ಕೃತಿ ಯವರನ್ನು ಅನುಕರಿಸಿದರೆ, ಅನುಸರಿಸಿದರೆ ಮತ್ತು ಸಂಸ್ಕೃತಿ ಪರಿವರ್ತನೆಯನ್ನು ಮಾಡಿಕೊಂಡರೆ ಅದರಲ್ಲಿ ತಪ್ಪೇನಿದೆ ? ಹೀಗೆ ಪರಿಸ್ಥಿತಿಯ ಒತ್ತಡವು ಸಂಸ್ಕೃತಿಯ ವಾಹಕವಾಗಿ ಪರಿಣ ಮಿಸುವುದು.

ಮತಾಂತರ ಹೊಂದುವಿಕೆಯು ಸಂಸ್ಕೃತಿಯ ಇನ್ನೊಂದು ವಾಹಕವಾಗಿದೆ. ಬ್ರಿಟಿಷರ ಆಳಿಕೆಯಲ್ಲಿ, ವಿಶೇಷವಾಗಿ ಈಸ್ಟ

ಇಂಡಿಯಾ ಕಂಪನಿಯ ಆಡಳಿತೆಯಲ್ಲಿ, ಮತಾಂತರಗೊಳಿಸುವ ಕಾರ್ಯವು ಹೆಚ್ಚಾಗಿ ನಡೆಯಿತು. ಭಾರತದಲ್ಲಿಯ ಬಡ ಹಿಂದುಳಿದ ಮನೆತನಗಳು ಬಡತನದ ಬವಣೆಯನ್ನೂ, ತಮ್ಮ ದೇಶದ ಇತರ ಸಮಾಜದವರ ತಿರಸ್ಕಾರವನ್ನೂ, ಅವಹೇಳನ ವನ್ನೂ, ದಬ್ಬಾಳಿಕೆಯನ್ನೂ ತಡೆಯದೆ ಪಶ್ಚಿಮದಿಂದ ಬಂದ ಮಿಶನರಿಗಳಿಗೆ ಮಾರುಹೋಗಿ ಮತಾಂತರ ಹೊಂದಿದುದನ್ನು ಇತಿಹಾಸದಲ್ಲಿ ಓದುತ್ತೇವೆ. ಇದಕ್ಕೆ ಮಿಶನರಿಗಳೂ ಕೆಲಮಟ್ಟಿಗೆ ಕಾರಣರಾಗಿರಬಹುದು. ಇಲ್ಲಿಯ ಹಿಂದುಳಿದ ಸಮಾಜದವರಿಗೆ ಆಶೆ-ಆಮಿಷಗಳನ್ನು ತೋರಿಸಿ ಅವರನ್ನು ಮತಾಂತರ ಗೊಳಿ ಸಲು ಪ್ರಯತ್ನಗಳು ನಡೆದವು. ಮತಾಂತರ ಹೊಂದಿದ ಮನೆ ತನಗಳು ಕಾಲಾನುಕ್ರಮದಲ್ಲಿ ಮಿಶನರಿಗಳ ಆಚಾರ-ವಿಚಾರ; ಪೋಷಾಕು; ಆಹಾರ-ವಿಹಾರ; ರೀತಿ-ನೀತಿ; ಸಂಪ್ರದಾ ಯಗಳನ್ನು ಅಳವಡಿಸಿಕೊಂಡರು; ತಮ್ಮ ಹೆಸರುಗಳನ್ನು ಮೊದಲಿದ್ದಂತೆಯೇ ಇಟ್ಟುಕೊಂಡರೂ ಮುಂದೆ ತಮ್ಮ ಮಕ್ಕಳ ಹೆಸರುಗಳನ್ನು ಕ್ರಿಶ್ಚಿಯನ್ ಹೆಸರುಗಳಾಗಿಯೇ ಇಟ್ಟರು. ಹೀಗೆ ಸಂಸ್ಕೃತಿ ಪರ್ಯವಸಾನ ಹೊಂದಿದ ಕುಟುಂಬಗಳಲ್ಲಿ ಪೂರ್ವದ ಸಂಸ್ಕೃತಿಯೂ ಕೂಡಿಯೇ ಕೆಲಸಮಯ ಸಾಗುವುದು. ಬರುಬರುತ್ತ ಮೊದಲಿನದು ಮಾಯವಾಗಿ ಆ ಕುಟುಂಬಗಳಲ್ಲಿ ಹುಟ್ಟಿಬರುವ ನಾಲ್ಕಾರು ತಲೆಮಾರುಗಳ ಅಂದರೆ ಪೀಳಿಗೆಗಳ ಅನಂತರ ಹೊಸ ಸಂಸ್ಕೃತಿಯೇ ಬೇರೂರಿ ನಿಲ್ಲುವುದು.

ಹೀಗೆ ಮತಾಂತರ ಹೊಂದುವುದು ಅದರ ಪರಿಣಾಮವಾಗಿ ಸಂಸ್ಕೃತಿ ಬದಲಾವಣೆಗೆ ಬಲುಮೆಯೂ ಕಾರಣವಾಗಿರುವುದನ್ನು ಇತಿಹಾಸದ ಪುಟಗಳಿಂದ ತಿಳಿಯುತ್ತೇವೆ. ಕೆಲವು ಮುಸಲ್ಮಾನ ಅರಸರ ಆಳಿಕೆಯಲ್ಲಿ ಆಳರಸರ ಪ್ರಾಬಲ್ಯದಿಂದ ಮತ್ತು ಬಲಾತ್ಕಾರದಿಂದ ಅನೇಕ ಹಿಂದೂಗಳು ಮುಸ್ಲಿಂ ಸಂಸ್ಕೃತಿಗೆ ಒಳಗಾದುದನ್ನು ಕಾಣುತ್ತೇವೆ. ಅದರಂತೆ ಆಂಗ್ಲ ಸಂಸ್ಕೃತಿಯ ವಾಹಕವಾಗಿ ಅವರ ರಾಜಕೀಯ ಪ್ರಾಬಲ್ಯವೂ ಕಾರ್ಯಮಾಡಿದೆಯೆಂದು ಸೂಕ್ಷ್ಮವಾಗಿ ಅವಲೋಕಿಸಿದರೆ ಕಂಡುಬರುವುದು. ಹಿಂದುಳಿದ ವರ್ಗಗಳು ಆಶೆ-ಆಮಿಷಗಳಿಗೆ ಇಲ್ಲವೆ ಪರಿಸ್ಥಿತಿಯ ಒತ್ತಡದಿಂದ ಆಂಗ್ಲ ಸಂಸ್ಕೃತಿಗೆ ಒಳಗಾದರೆ ಆಂಗ್ಲ ಶಿಕ್ಷಣದ ಪ್ರಭಾವಕ್ಕೆ ಹಾಗೂ ಆಂಗ್ಲರ ವೈಭವ ಮತ್ತು ಬಾಹ್ಯ ಮೆರುಗಿಗೆ ಮರುಳಾಗಿ ಕೆಲವು ಉಚ್ಚಜಾತಿಯ ಜನರು ಆಂಗ್ಲ ಸಂಸ್ಕೃತಿಯನ್ನು ತಮ್ಮ ನಿತ್ಯ ಜೀವನದಲ್ಲಿ ಬೆರೆಸಿಕೊಂಡರು. ಸರಕಾರಿ ಇಲಾಖೆಗಳಲ್ಲಿಯ ಉಚ್ಚ ದರ್ಜೆಯ ನೌಕರಿಗಳಿಗೂ, ತನ್ಮೂಲಕ ಲಭ್ಯವಾಗುತ್ತಿದ್ದ ಅಧಿಕಾರ ಹಾಗೂ ಐಷಾರಾಮ ಜೀವನಕ್ಕೂ ಮೋಹಿತರಾಗಿ ಅಂದಿನ ಉಚ್ಚ ಜಾತಿಯ ಮಹನೀಯರನೇಕರು ಆಂಗ್ಲ ಶಿಕ್ಷಣ ಪಡೆದು ಉಚ್ಚ ಅಧಿಕಾರ ಸ್ಥಾನಗಳನ್ನು ಹೊಂದಿ ಐಹಿಕ ಸುಖ ಜೀವನವನ್ನು ಸಾಗಿಸುವುದರ ಮೂಲಕ ಆಂಗ್ಲ ಸಂಸ್ಕೃತಿಯನ್ನು ಅಳವಡಿಸಿಕೊಂಡರು. ಹೀಗೆ ಒಂದು ಸಂಸ್ಕೃತಿಯ ವಾಹಕವಾಗಿ ಆ ಸಂಸ್ಕೃತಿಯ ಬೆಡಗು-ಬಿನ್ನಾಣಗಳು ಸಹ ಕೆಲವು ಸಂದರ್ಭಗಳಲ್ಲಿ ಪರಿಣಾಮಕಾರಿಯಾಗುವುವೆಂದು ಹೇಳಬಹುದು.

ಕೆಲವು ಸಲ ವಿಭಿನ್ನ ಸಂಸ್ಕೃತಿಗಳು ಜೊತೆ ಜೊತೆಯಾಗಿ ಸಾಗಿರುವುದನ್ನೂ ಕಾಣುತ್ತೇವೆ. ಮುಸ್ಲಿಂ ಅರಸರ ಆಳಿಕೆಯಲ್ಲಿ ಕಾಣಿಸಿಕೊಂಡ ಇಸ್ಲಾಂ ಸಂಸ್ಕೃತಿಯು ಆ ಅರಸರ ಆಳಿಕೆಯು ಕೊನೆಗೊಂಡ ಅನಂತರವೂ ಹಿಂದೂ ಸಂಸ್ಕೃತಿಯೊಡನೆ ಸೌಹಾರ್ದತೆಯಿಂದ ಸಾಗಿ ಬಂದುದನ್ನು ನೋಡಬಹುದು. ಹೊರಗಿನಿಂದ ಬಂದ ಮುಸ್ಲಿಮ್‌ರು ಇಲ್ಲಿಯೇ ನೆಲೆನಿಂತರು. ಬರಬರುತ್ತ ಇಲ್ಲಿಯ ಹಿಂದೂಗಳನ್ನು ಪ್ರೇಮದಿಂದ ಕಾಣತೊಡಗಿದರು; ಹಿಂದೂಗಳು ಸಹ ಮುಸ್ಲಿಂರನ್ನು ಬಂಧುಗಳಂತೆ ಕಂಡುಕೊಂಡರು. ಹೀಗೆ ಮುಸ್ಲಿಂ ಹಾಗೂ ಹಿಂದೂ ಸಂಸ್ಕೃತಿಯ ಐಕ್ಯತೆಯನ್ನು ಶಹರಗಳಿಗಿಂತ ಹಳ್ಳಿಗಳಲ್ಲಿ ಹೆಚ್ಚಾಗಿ ಕಾಣಬಹುದು. ಮೊಹರಮ್ ಹಬ್ಬದಲ್ಲಿ ಜಾತಿಭೇದವಿಲ್ಲದೆ ಹಿಂದೂಗಳು ಸಹ ಭಾಗಿಗಳಾಗುವುದು; ಕೆಲವು ಹಳ್ಳಿಗಳಲ್ಲಿ ಹಿಂದೂ ಜನರೇ ಡೋಲಿ ಹೊರುವುದು, ಹಿಂದೂ ಬಾಲಕರು ಲಾಡೀಹಾಕಿಕೊಂಡು ಫಕೀರರಾಗುವುದು, ವಿವಿಧ ಸೋಗು ಹಾಕುವುದನ್ನು ಕಾಣಬಹುದು. ಅದರಂತೆ ಹಿಂದೂ ಜನರ ದೊಡ್ಡ ಹಬ್ಬಗಳನ್ನು ಮುಸಲ್ಮಾನರು ಸಹ ಆಚರಿಸುವುದನ್ನು ಕೆಲವು ಹಳ್ಳಿಗಳಲ್ಲಿ ಕಾಣಬಹುದು. ಹಿಂದೂ ಹಾಗೂ ಇಸ್ಲಾಂ ಸಂಸ್ಕೃತಿಗಳು ಸಮರಸವಾಗಿ ಸಾಗಿ ಬಂದುದರಿಂದಲೇ ಹಳ್ಳಿಯ ಜನಜೀವನವು ಮಧುರವಾಗಿದ್ದಿತು.

ವ್ಯಾಪಾರ ಮತ್ತು ಸಾರಿಗೆ ಸಂಪರ್ಕಗಳು ಸಹ ಸಂಸ್ಕೃತಿ ಪ್ರಸಾರದ ವಾಹಕಗಳೆಂದು ಹೇಳಬಹುದು. ಪೂರ್ವಕಾಲದಲ್ಲಿ

ನಮ್ಮವರು ಇಜಿಪ್ತ ಮೊದಲಾದ ದೇಶಗಳೊಡನೆ ವ್ಯಾಪಾರ ಮಾಡುತ್ತಿದ್ದರಂತೆ. ಹೀಗೆ ಇಜಿಪ್ತ ಹಾಗೂ ಇತರ ದೇಶಗಳಲ್ಲಿ ತಮ್ಮ ಸಂಸ್ಕೃತಿಯನ್ನು ಬೀರಿರಬಹುದು. ನಮ್ಮ ಸಂಸ್ಕೃತಿ ಹಾಗೂ ಭೌತಿಕತೆಯನ್ನು ಕಂಡು ಪಾಶ್ಚಾತ್ಯರು ನಮ್ಮ ದೇಶವನ್ನು ಶೋಧಿಸಿ ನಮ್ಮಲ್ಲಿಯ ಉದ್ಯೋಗ ಕುಶಲತೆಯನ್ನು, ಸತ್ಯ, ಪ್ರಾಮಾಣಿಕತನದಿಂದ ಕೂಡಿದ ಹಾಗೂ ಧಾರ್ಮಿಕ ತಳಹದಿಯ ಮೇಲೆ ನಿಂತ ನಮ್ಮ ಸಂಸ್ಕೃತಿಯ ಎಳೆಗಳನ್ನು ತಮ್ಮಲ್ಲಿಗೆ ತೆಗೆದುಕೊಂಡು ಹೋದರು. ನಮ್ಮ ಪೂರ್ವಜರ ಸದ್ಗುಣಗಳನ್ನು ಹಾಗೂ ನಮ್ಮ ಸಂಸ್ಕೃತಿಯ ಒಳ್ಳೆಯ ಅಂಶಗಳನ್ನು ತಮ್ಮಲ್ಲಿ ಅಳವಡಿಸಿಕೊಂಡರು.

ಪ್ರೇಮವಿವಾಹ ಹಾಗೂ ವಲಸೆ ಹೋಗುವಿಕೆ ಇವು ಸಹ ಸಂಸ್ಕೃತಿವಾಹಕದ ಸಾಧನಗಳಾಗಿವೆ. ಬೇರೆ ಬೇರೆ ಸಂಸ್ಕೃತಿಯ ಯುವಕ-ಯುವತಿಯರು ಕಾರಣಾಂತರದಿಂದ ಪ್ರೇಮವಿವಾಹದಿಂದ ಬಂಧಿತರಾದರೆ ಅವರವರ ಸಂಸ್ಕೃತಿಗಳು ಸಹ ಮಿಲನವಾಗುವವು. ಅದರಂತೆ ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಇಲ್ಲವೆ ಒಂದು ಸಂಸ್ಕೃತಿಯುಳ್ಳ ಪ್ರದೇಶದಿಂದ ಬೇರೊಂದು ಸಂಸ್ಕೃತಿಯ ಪ್ರದೇಶಕ್ಕೆ ವಲಸೆಹೋದರೆ ಅಲ್ಲಿಯ ಸಂಸ್ಕೃತಿಯು ಕೆಲ ಸಮಯದನಂತರ ತಾನೇ ತಾನಾಗಿ ವಲಸೆ ಹೋದವರ ಜೀವನದಲ್ಲಿ ಹಾಸುಹೊಕ್ಕಾಗುವುದು.

ಕೊನೆಯದಾಗಿ ಶಿಕ್ಷಣವು ಸಂಸ್ಕೃತಿಯ ಅತ್ಯುತ್ತಮ ವಾಹಕವಾಗಿದೆ. ಹೀನ ಸಂಸ್ಕೃತಿಯ ವ್ಯಕ್ತಿಯೋರ್ವನು ಶಿಕ್ಷಣ

ಪಡೆದರೆ ಅದರ ಬಲದಿಂದ ತನ್ನ ಸಂಸ್ಕೃತಿಯನ್ನೇ ಬದಲಾಯಿಸ ಬಲ್ಲನು. ಶಿಕ್ಷಣದ ಧ್ಯೇಯಗಳು ಉದಾತ್ತವಾಗಿರುವುದರಿಂದ ಶಿಕ್ಷಣ ಹೊಂದಿದ ವ್ಯಕ್ತಿಗಳು ತಮ್ಮ ಸಂಸ್ಕೃತಿಯನ್ನು ಉದಾತ್ತ ಗೊಳಿಸುವುದರಲ್ಲಿ ಸಂದೇಹವಿಲ್ಲ.

೭. ಪಾಶ್ಚಾತ್ಯ ಸಂಸ್ಕೃತಿ

ಒಂದೊಂದು ಮನೆತನಕ್ಕೂ, ಸಮಾಜಕ್ಕೂ, ಮತಕ್ಕೂ ಒಂದೊಂದು ಸಂಸ್ಕೃತಿಯುಂಟೆಂದು ಹೇಳುತ್ತಾರೆ. ಅದರಂತೆ ಪ್ರತಿಯೊಂದು ದೇಶಕ್ಕೂ ತನ್ನದೇ ಆದ ಸಂಸ್ಕೃತಿ ಇರುತ್ತದೆ. ಆದರೆ ಭಾರತದಲ್ಲಿ ಎರಡು ಸಂಸ್ಕೃತಿಗಳು ಮುಖ್ಯವೆಂದು ಪರಿಗಣಿಸಲಾಗಿದೆ; ಒಂದು ಪಾಶ್ಚಾತ್ಯ ಸಂಸ್ಕೃತಿ ಇನ್ನೊಂದು ಪೌರ್ವಾತ್ಯ ಸಂಸ್ಕೃತಿಯನ್ನು ಸಾಮಾನ್ಯವಾಗಿ ಪ್ರತಿನಿಧೀಕರಿಸುವ ಭಾರತೀಯ ಸಂಸ್ಕೃತಿ. ಆದರೆ ಮೂಲತಃ ಸಂಸ್ಕೃತಿಯೆಂಬುದು ಒಂದೇ ಎಂಬುದನ್ನು ಮರೆಯಕೂಡದು ಒಂದೊಂದು ದೇಶದಲ್ಲಿ ಸ್ಫುಟವಾಗಿ ಗೋಚರಿಸುವ ವಿಧಾನಗಳು ಒಂದೊಂದು ತೆರನಾಗಿರುವುದರಿಂದ ವಿವಿಧ ಸಂಸ್ಕೃತಿಗಳೆಂದು ವಿಭಜಿಸಲಾಗಿದೆಯೆಂದು ಹೇಳಬಹುದು.

ಪಾಶ್ಚಾತ್ಯ ಸಂಸ್ಕೃತಿಯು ಪೌರುಷ ಪ್ರಧಾನ. ಅದು ಮನುಷ್ಯನ ಪೌರುಷವೇ ಪ್ರಧಾನ ಎಂಬ ತತ್ತ್ವದ ಮೇಲೆ ನಿಂತಿದೆ. ಮನುಷ್ಯನಿಗೆ ಅಸಾಧ್ಯವಾದುದು ಯಾವುದೂ ಇಲ್ಲ, ಅವನು ಮನಸ್ಸು ಮಾಡಿದರೆ ಏನನ್ನಾದರೂ ಸಾಧಿಸಬಲ್ಲನು ಎಂಬ ಭಾವನೆಯು ಈ ಸಂಸ್ಕೃತಿಯಲ್ಲಿ ಬಹುದಿನ

ಗಳಿಂದ ಮೂಡಿಬಂದಿದೆ. ಹದಿನೈದು-ಹದಿನಾರನೆಯ ಶತಮಾನ ಗಳಲ್ಲಿ ಭಾರತದ ವೈಭವವನ್ನು ಕೇಳಿ ಕೇಳಿ ಈ ದೇಶವನ್ನು ಶೋಧ ಮಾಡಿ ಇದರೊಡನೆ ವ್ಯಾಪಾರ ಬೆಳೆಸಬೇಕೆಂಬ ಹವ್ಯಾಸ ದಿಂದ ಕೋಲಂಬಸ, ವಾಸ್ಕೋಡ ಗಾಮಾ ಮೊದಲಾದ ಸಾಹಸಿ ಗರು ಪ್ರವಾಸ ಕೈಕೊಂಡರು. ಇಂದಿನಂತೆ ಉಗಿಹಡಗಗಳಾ ಗಲಿ, ವಿಮಾನಗಳಾಗಲಿ ಇಲ್ಲದ ಆ ಕಾಲದಲ್ಲಿ ದೊಡ್ಡ ದೊಡ್ಡ ಡೋಣಿಗಳಲ್ಲಿ ಪ್ರವಾಸ ಕೈಕೊಂಡ ಅವರಲ್ಲಿ ಕೆಲವರು ಬೇರೆ ಕೆಲವು ದೇಶಗಳನ್ನು ಶೋಧಿಸಿದರು. ವಾಸ್ಕೋಡ ಗಾಮಾನು ಮಾತ್ರ ಅನೇಕ ಕಷ್ಟ-ನಷ್ಟಗಳನ್ನನುಭವಿಸಿ ಕೊನೆಗೆ ಭಾರತದ ಪಶ್ಚಿಮ ದಂಡೆಯ ಮೇಲಿರುವ ಕಾಲಿಕತ್ತ ಬಂದರವನ್ನು ತಲುಪಿದನು. ಅವನ ಅನಂತರ ಡಚ್ಚರು, ಫ್ರೆಂಚರು, ಆಂಗ್ಲರು ಭಾರತಕ್ಕೆ ಬಂದರು; ವ್ಯಾಪಾರವನ್ನು ಪ್ರಾರಂಭಿಸಿದರು. ಇರಲಿ ಇದೊಂದರಿಂದ ಪ್ರೇರಿತರಾದ ಪಶ್ಚಿಮ ದೇಶಗಳ ಜನರು ಮನುಷ್ಯ ಪ್ರಯತ್ನದಲ್ಲಿ ದ್ವಿಗುಣಿತ ವಿಶ್ವಾಸವನ್ನು ತಳೆದರು. ಇಂದು ಕಂಡುಬರುವ ವಿಜ್ಞಾನದ ಶೋಧನೆಗಳಾದ ಉಗಿಬಂಡಿ, ಉಗಿಹಡಗ, ಗಡಿಯಾರ, ಟೆಲಿಫೋನ, ಟೆಲಿಗ್ರಾಫ, ಟೆಲಿಪ್ರಿಂಟ, ಟೆಲಿಸ್ಕೋಪ, ಟೆಲಿವ್ಹಿಜನ್, ರೇಡಿಯೋ ಮೊದಲಾದ ಸೌಕರ್ಯ ಗಳೂ, ಹಲವು ಬಗೆಯ ವಿಮಾನಗಳೂ, ಆ್ಯಟಂಬಾಂಬದಂಥ ಭೀಕರ ಮಾರಕಾಸ್ತ್ರಗಳೂ ಮನುಷ್ಯ ಪ್ರಯತ್ನದ ಫಲಗಳಲ್ಲವೇ? ಅಂತರಿಕ್ಷಯಾನದಲ್ಲಿ ಪ್ರಗತಿಯನ್ನು ಸಾಧಿಸಿ, ಚಂದ್ರಯಾತ್ರೆ ಯನ್ನು ಕೈಕೊಂಡು ಯಶಸ್ವಿಯಾಗಿ ಪೂರ್ತಿಗೊಳಿಸಿ ಮರಳಿ ಸುರಕ್ಷಿತವಾಗಿ ಭೂಮಿಗೆ ಬಂದುದು ಸಾಮಾನ್ಯವೇ? ಭೂಲೋಕ

ದಲ್ಲಿರುವ ಒಂದು ದೇಶದ ಧ್ವಜವು ಚಂದ್ರನ ಮೇಲೆ ಹಾರಾಡುವುದು ಯಾರಿಗೆ ಹೆಮ್ಮೆಯನ್ನುಂಟು ಮಾಡಲಿಕ್ಕಿಲ್ಲ! ಇದೆಲ್ಲ ಮಾನವನ ಪೌರುಷದ ಸಾಧನೆ.

ಇದರಂತೆ ಎಂಜಿನಿಯರಿಂಗ, ವೈದ್ಯಕೀಯ, ವಿದ್ಯುತ್ ಮೊದಲಾದ ಕ್ಷೇತ್ರಗಳಲ್ಲಿ ಸಾಧಿಸಿದ ಅದ್ಭುತ ಪ್ರಗತಿಯನ್ನು ಕಾಣುತ್ತೇವೆ. ಹೀಗೆ ನಿಸರ್ಗದ ಮೇಲೆ ಪ್ರಭುತ್ವವನ್ನು ಸ್ಥಾಪಿಸ ಹೊರಟ ಪಾಶ್ಚಾತ್ಯರು ಭೌತಿಕವಾದಿಗಳಾಗಿ ಐಹಿಕ ಸುಖಕ್ಕೆ ಮಹತ್ವಕೊಟ್ಟರು. ವಿಜ್ಞಾನದ ಅಭಿವೃದ್ಧಿಯನ್ನು ಸಾಧಿಸಿ ಹೊಸ ಹೊಸ ಶೋಧಗಳ ಬೆನ್ನುಹತ್ತಿದರು. ನಿಸರ್ಗವು ಅಪಾರವೂ, ಅಗಮ್ಯವೂ, ಅನಂತವೂ ಎಂಬುದರ ಪರಿವೆಯಿಲ್ಲದೆ ಮೃಗಜಲದ ಬೆನ್ನು ಹತ್ತಿ ಓಡುತ್ತಿರುವ ಹರಿಣಿಗಳಂತೆ ನೂತನ ಶೋಧನೆಗಳಲ್ಲಿ ನಿರತರಾಗಿ ಆತ್ಮಶಾಂತಿಯನ್ನೂ, ಸಮಾಧಾನವನ್ನೂ, ಮನಸ್ಸಿನ ನೆಮ್ಮದಿಯನ್ನೂ ಕಳೆದುಕೊಂಡರು.

ಪಾಶ್ಚಾತ್ಯ ಸಂಸ್ಕೃತಿಯು ಪ್ರಜಾಪ್ರಭುತ್ವದ ತಳಹದಿಯ ಮೇಲೆ ನಿಂತಿರುವುದು ಅದರ ಇನ್ನೊಂದು ವೈಶಿಷ್ಟ್ಯವಾಗಿದೆ. ಅರಸನಿಗೆ ಮಹತ್ವವಿದ್ದ ಕಾಲವನ್ನು ಪಾಶ್ಚಾತ್ಯರು ಬಹು ದಿನಗಳ ಹಿಂದೆಯೇ ನೀಗಿದರು. ಕೆಲವು ದೇಶದಲ್ಲಿ ಅರಸನಿದ್ದರೂ ಹೆಸರಿಗೆ ಮಾತ್ರ. ಅನೇಕ ಪಾಶ್ಚಾತ್ಯ ದೇಶಗಳ ಇತಿಹಾಸದ ಪುಟಗಳನ್ನು ತಿರುವಿ ಹಾಕಿದರೆ ವ್ಯಕ್ತಿ ಪೂಜೆಯು (Hero Worship) ಕಂಡುಬರುವುದಿಲ್ಲ. ವ್ಯಕ್ತಿಗಿಂತ ದೇಶ ಮುಖ್ಯ. ದೇಶದ ಬಿಕ್ಕಟ್ಟಿನ ಪ್ರಸಂಗದಲ್ಲಿ ಯಾವನೊಬ್ಬ ವ್ಯಕ್ತಿಯು

ಎಷ್ಟೇ ಅದ್ಭುತ ಕಾರ್ಯ ಮಾಡಿರಲಿ; ಮುಂದೆ ಅವನ ಸೇವೆಯು ಆವಶ್ಯವಿರದಿದ್ದರೆ, ಅವನನ್ನು ಆ ಮಹತ್ವದ ಗದ್ದುಗೆಯಿಂದ ಇಳಿಸಲು ಅಲ್ಲಿಯ ಜನತೆಯು ಹಿಂದು-ಮುಂದು ನೋಡುವುದಿಲ್ಲ. ದ್ವಿತೀಯ ಜಾಗತಿಕ ಮಹಾ ಯುದ್ಧದಿಂದ ಇಂಗ್ಲಂಡ ದೇಶವನ್ನು ರಕ್ಷಿಸಿ ಯಶಸ್ಸನ್ನು ತಂದುಕೊಟ್ಟ ಚರ್ಚಿಲ್ಲರನ್ನು ಯುದ್ಧ ಮುಗಿದ ಕೆಲವೇ ದಿನಗಳಲ್ಲಿ ನಡೆದ ಚುನಾವಣೆಗಳಲ್ಲಿ ಪ್ರಧಾನಮಂತ್ರಿ ಪದವಿಯಿಂದ ಕೆಳಗಿಳಿಸಲಾಯಿತು. ಯುದ್ಧಾನಂತರದ ಅವಧಿಯಲ್ಲಿ ನಡೆಯಬೇಕಾದ ಕಾರ್ಯಗಳಿಗೆ ಅವರಿಂದ ಅಷ್ಟು ಉತ್ತಮ ಕೆಲಸವಾಗಲಿಕ್ಕಿಲ್ಲವೆಂಬ ಪ್ರಜ್ಞೆ ಪ್ರಜೆಗಳಲ್ಲಿ ಇದ್ದುದೇ ಇದಕ್ಕೆ ಕಾರಣ. ಅರಸನು ಸತ್ತರೆ "The King is dead, Long live the King" ಎಂದು ಹೇಳುವ ಬ್ರಿಟಿಷರು ಅರಸನನ್ನು ನಿಮಿತ್ತಮಾತ್ರಕ್ಕೆ ಇಟ್ಟು ಅವನ ಹೆಸರಿನಿಂದ ಪ್ರಜಾಪ್ರಭುತ್ವ ತಳಹದಿಯ ಮೇಲೆ ರಾಜ್ಯಭಾರ ನಡೆಸುತ್ತಾರೆ. ಯುದ್ಧದಲ್ಲಿ ಸೇನಾಪತಿಯು ಸತ್ತರೆ ಉಳಿದ ಸೈನಿಕರು ಓಡಿ ಹೋಗುವುದಿಲ್ಲ; ಮತ್ತೊಬ್ಬ ಸೇನಾಪತಿಯು ನೇಮಿಸಲ್ಪಟ್ಟು ಯುದ್ಧವನ್ನು ಮುಂದುವರಿಸುತ್ತಾನೆ. ಮುಖ್ಯಸ್ಥನೆನ್ನುವವನಿಗೆ ಮಹತ್ವವಿರದೆ ಪ್ರತಿಯೊಬ್ಬ ಸೈನಿಕನಿಗೂ ಮಹತ್ವವಿರುತ್ತದೆ. ಈ ಪರಂಪರೆಯು ಬಹು ದಿನಗಳಿಂದ ಪಾಶ್ಚಾತ್ಯ ದೇಶಗಳಲ್ಲಿ ನಡೆಯುತ್ತ ಬಂದಿದೆ. ವಿಶೇಷವಾಗಿ ಬ್ರಿಟನ್‌ದಲ್ಲಿ ಇದನ್ನು ನಾವು ಕಾಣಬಹುದು. ಆದುದರಿಂದಲೇ ಬ್ರಿಟನ್‌ಗೆ ಎಂದೂ ಅಪಜಯವಾಗಿಲ್ಲ ಇದಲ್ಲದೆ ಪಾಶ್ಚಾತ್ಯ ದೇಶಗಳಲ್ಲಿ ನಿರಂಕುಶ ಪ್ರಭುತ್ವವನ್ನು ಎಂದೂ ಸಹಿಸರು. ೧೯ನೆಯ

ಶತಮಾನದಲ್ಲಿ ಇಂಗ್ಲಂಡದಲ್ಲಿ ಆದ ರಾಜ್ಯಕ್ರಾಂತಿ; ಅದರಂತೆ ಫ್ರಾನ್ಸಿನಲ್ಲಿ ೧೪ ನೆಯ ಲುಯಿಯ ಕಾಲಕ್ಕೆ ಆದ ಕ್ರಾಂತಿಗಳು ಇದಕ್ಕೆ ಉದಾಹರಣೆಯಾಗಿವೆ.

ಪಾಶ್ಚಾತ್ಯ ದೇಶಗಳಲ್ಲಿ ಐಹಿಕ ಐಷಾರಾಮಕ್ಕೆ ಸಾಧಕವಾದ ಸಾಮಾಜಿಕ, ರಾಜಕೀಯ, ವಾಣಿಜ್ಯ ಕಾರ್ಯಗಳಿಗೆ ಗಮನ ಕೊಡುವುದು ವಿಶೇಷವಾಯಿತು. ಜಗತ್ತಿನ ಯೋಗಕ್ಷೇಮಕ್ಕಿಂತ ಸ್ವದೇಶದ ಯೋಗಕ್ಷೇಮವು ಮುಖ್ಯವಾಯಿತು. ಮಿತಿಮೀರಿದ ರಾಷ್ಟ್ರೀಯ ಭಾವನೆಯ ಹುಚ್ಚು ಹೊಳೆಯ ಸೆಳವಿಗೆ ಸಿಲುಕಿ ಇತರ ದೇಶಗಳ ಅಭ್ಯುದಯವನ್ನು ಕಡೆಗಣಿಸಲಾಯಿತು; ಸ್ಪರ್ಧಾತ್ಮಕ ಭಾವವು ಬಲಿಯಿತು; ದುರ್ಬಲ ರಾಷ್ಟ್ರಗಳನ್ನು ಎತ್ತಿಕಟ್ಟಿ ಬಲಿಷ್ಠ ರಾಷ್ಟ್ರಗಳು ತಮ್ಮ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳತೊಡಗಿದವು.

ಸಾಮಾಜಿಕ ಪ್ರಜ್ಞೆಯು ಪಾಶ್ಚಾತ್ಯ ಸಂಸ್ಕೃತಿಯ ಇನ್ನೊಂದು ವೈಶಿಷ್ಟ್ಯವಾಗಿದೆ. ನಾಡಿನ ಓರ್ವ ಪ್ರಜೆಯಾಗಿ ಮಾಡಬೇಕಾದ ಕರ್ತವ್ಯವು ಯಾವುದು? ಅದರಿಂದ ತನ್ನ ಸುತ್ತಲಿನ ಸಮಾಜಕ್ಕೆ ಅನರ್ಥವಾಗಲಿ, ಅನ್ಯಾಯವಾಗಲಿ ಆಗಕೂಡದು; ರಾಷ್ಟ್ರದ ನಿಯಮ ನಿರ್ಬಂಧನೆಗಳನ್ನು ಚಾಚೂ ತಪ್ಪದೆ ಪಾಲಿಸಬೇಕು; ಸಾಮಾಜಿಕ ಕಟ್ಟಳೆಗಳನ್ನು ಮುರಿಯಕೂಡದು ಎಂಬುದು ಪಾಶ್ಚಾತ್ಯರಲ್ಲಿ ಹಾಗೂ ಅವರ ಜೀವನಕ್ರಮದಲ್ಲಿ ಹಾಸು ಹೊಕ್ಕಾಗಿದೆ. ಈ ಸಾಮಾಜಿಕ ಪ್ರಜ್ಞೆಯನ್ನು ಅತ್ಯಂತ ಸಣ್ಣ ಸಂಗತಿಗಳಲ್ಲಿ ಸಹ ಕಾಣಬಹುದು. ರಸ್ತೆಯ

ನಿಯಮಗಳನ್ನು ಪಾಲಿಸುವುದು; ಪ್ರಾಮಾಣಿಕ ಜೀವನವನ್ನು ಸಾಗಿಸುವುದು; ಶಿಸ್ತು ಪಾಲನೆ; ದುಡಿಯುವಾಗ ದುಡಿಯುವುದು; ವಿಶ್ರಾಂತಿ ಪಡೆಯುವಾಗ ವಿಶ್ರಾಂತಿ ಪಡೆಯುವುದು; ವೇಳೆಯ ಕಲ್ಪನೆಯನ್ನಿಟ್ಟುಕೊಳ್ಳುವುದು; ತನ್ನ ದೇಶಬಾಂಧವರಿಗೆ ತೊಂದರೆಯಾಗದಂತೆ ನಡೆದುಕೊಳ್ಳುವುದು ಇತ್ಯಾದಿ ಸಂಗತಿಗಳು ಪಾಶ್ಚಾತ್ಯ ಸಂಸ್ಕೃತಿಯಲ್ಲಿ ನೆಲೆನಿಂತಿವೆ.

ಯಾವುದೊಂದು ವಿಷಯವನ್ನು ಸಾರಾಸಾರ ವಿಚಾರದ ಅನಂತರ ನಂಬುವುದು ಪಾಶ್ಚಾತ್ಯ ಸಂಸ್ಕೃತಿಯ ಬೇರೊಂದು ವೈಶಿಷ್ಟ್ಯವಾಗಿದೆ. ಹೀಗೆ ವಿಚಾರ ಮಾಡುವುದಕ್ಕೆ Reasoning (ಬುದ್ಧಿಯ ಒರೆಗಲ್ಲಿಗೆ ತಿಕ್ಕಿ ನೋಡುವುದೆಂದೂ) ವೈಜ್ಞಾನಿಕ ದೃಷ್ಟಿಯೆಂದೂ ಕರೆಯಬಹುದು. ಹಿಂದೆ ಪುರಾಣದಲ್ಲಿ ಹಾಗೆ ಹೇಳಿದೆ; ಇಲ್ಲವೆ ಆ ಧಾರ್ಮಿಕ ವ್ಯಕ್ತಿಯು ಹೀಗೆ ಹೇಳುತ್ತಾನೆ; ಕಾರಣ ನಂಬಬೇಕು ಎನ್ನುವುದು ಪಾಶ್ಚಾತ್ಯರಲ್ಲಿ ಕಾಣಸಿಗುವುದು ಸಹ ವಿರಳ. ಅರ್ಥಾತ್ ಕುರುಡು ನಂಬಿಗೆಯಲ್ಲಿ ಅವರಿಗೆ ವಿಶ್ವಾಸವಿಲ್ಲ. ಆದರಂತೆ ಮೂಢ ನಂಬಿಕೆಗಳನ್ನಂತೂ- ಅವರು ಎಂದೂ ಅರಿಯರು. ಯಾವುದೊಂದು ಕಾರ್ಯಾಚರಣೆಗೆ ದೇವರು-ದಿಂಡರುಗಳಿಗೆ ಹರಕೆ ಹೊರುವುದನ್ನು ಕಾಣೆವು. ಆ ಕೆಲಸದ ಯಶಸ್ಸಿಗೆ ಸಶಾಸ್ತ್ರೀಯವಾಗಿ ಆಲೋಚಿಸುವರು; ಮನಃಪೂರ್ವಕ ಶ್ರಮಿಸುವರು; ಹಿಡಿದ ಕೆಲಸವನ್ನು ಸಾಂಗಗೊಳಿಸುವುದಕ್ಕಾಗಿ ಯಾವ ತ್ಯಾಗವನ್ನೂ ಮಾಡುವರು; ಕೆಲವು ಸಲ ವಿಫಲವಾದರೆ ಹಿಂಜರಿಯುವುದಿಲ್ಲ; ಮತ್ತೊಮ್ಮೆ, ಮಗುದೊಮ್ಮೆ ಯತ್ನ ಮಾಡುವರು; ಧೃತಿಗೆಡುವುದಿಲ್ಲ; ವಿಫಲತೆ

ಗಳು ಯಶಸ್ಸಿನ ಸೋಪಾನಗಳೆಂದು ಭಾವಿಸಿ ಪ್ರಯತ್ನವನ್ನು ಮುಂದುವರಿಸುವರು. ಆದರಂತೆ ಹಿಡಿದ ಕೆಲಸದ ಯಶಸ್ಸಿಗೆ ವೈಜ್ಞಾನಿಕ ಕಾರಣಗಳನ್ನು ಕಂಡುಹಿಡಿಯುವರು; ಆ ಕಾರಣ ಗಳನ್ನು ಆಧರಿಸಿ ಕಾರ್ಯ ಸಾಗಿಸುವರು; ಅಂತ್ಯದಲ್ಲಿ ಯಶಸ್ಸನ್ನು ಪಡೆಯುವರು. ಕೈಕೊಂಡ ಕೆಲಸವನ್ನು ಯಶಸ್ವಿ ಯಾಗಿ ಪೂರೈಸುವ ಒಂದು ಛಲ, ಜಿಗುಟುತನ, ಮನೋ ನಿರ್ಧಾರಗಳನ್ನು ಪಾಶ್ಚಾತ್ಯರಲ್ಲಿ ಮೊದಲಿನಿಂದಲೂ ನಾವು ಕಾಣುತ್ತೇವೆ. ಇದರಂತೆ ಸ್ವತಂತ್ರ ವಿಚಾರದ ಪ್ರಜೆಗಳನ್ನೂ ವಿಪುಲವಾಗಿ ಕಾಣುತ್ತೇವೆ. ಪರರ ವಿಚಾರದ ಬಗೆಗೆ ಸಾರಾಸಾರ ವಿಚಾರಿಸುವುದು, ಸರಿಕಂಡರೆ ಮಾತ್ರ ಅದನ್ನು ಸ್ವೀಕರಿಸುವುದು ಹಾಗೂ ಸ್ವಾವಲಂಬನ ಮತ್ತು ಸ್ವಯಂ ವಿಚಾರ—ಇವೇ ಮೊದಲಾದ ಶ್ರೇಷ್ಠ ಗುಣಗಳು ಪಾಶ್ಚಾತ್ಯರ ಜೀವನದಲ್ಲಿ ಸಮರಸಗೊಂಡಿವೆ.

ಭಾವುಕತನವು ಪಾಶ್ಚಾತ್ಯರಿಂದ ಬಹುದೂರವಾಗಿದೆ. ಪ್ರವಾಸಕ್ಕೆ ಹೊರಟಾಗ ಬೆಕ್ಕು ಅಡ್ಡ ಬಂದರೆ ಪ್ರಯಾಣವನ್ನು ಮುಂದೂಡುವುದಾಗಲಿ, ಹಲ್ಲಿ ನುಡಿತದಿಂದ ಮುಂದಿನ ಕೆಲಸದ ಯಶಾಪಯಶಗಳನ್ನು ಊಹಿಸುವುದಾಗಲಿ-ಹೀಗೆ ಭಾವುಕತನದ ವಿಚಾರಗಳನ್ನು ಪಾಶ್ಚಾತ್ಯರ ಜೀವನ ಕ್ರಮದಲ್ಲಿ ನಾವು ಕಾಣಲಾರೆವು. ಭಾರತದಲ್ಲಿಯೂ ಸಹ ಇಂತಹ ಭಾವುಕತನದ ವಿಚಾರಗಳು ಇತ್ತೀಚೆಗೆ ಬಹುಮಟ್ಟಿಗೆ ಕಡಿಮೆಯಾಗಿವೆ. ಪಾಶ್ಚಾತ್ಯ ಶಿಕ್ಷಣದ ಪ್ರಭಾವವೇ ಇದಕ್ಕೆ ಕಾರಣವೆಂದು ಬೇರೆ ಹೇಳಬೇಕಿಲ್ಲ.

೮. ಭಾರತೀಯ ಸಂಸ್ಕೃತಿ

ಭಾರತೀಯ ಸಂಸ್ಕೃತಿಯಲ್ಲಿ ಮನುಷ್ಯ ಪ್ರಯತ್ನಕ್ಕೆ ಸಾಕಷ್ಟು ಸ್ಥಾನವಿದ್ದರೂ ಪರಮಾತ್ಮನ ಸಂಕಲ್ಪವಿಲ್ಲದೆ ಹುಲ್ಲುಕಡ್ಡಿಯೂ ಸಹ ಚಲಿಸದು ಎಂಬ ವಿಚಾರವು ಈ ಎಲ್ಲ ಪ್ರಯತ್ನದ ಹಿನ್ನೆಲೆಯಾಗಿದೆ. ಪ್ರಯತ್ನಕ್ಕಿಂತ ದೇವರ ಅನುಗ್ರಹವೇ ಮುಖ್ಯವೆಂಬ ಭಾವನೆಯ ಮೇಲೆ ಭಾರತೀಯ ಸಂಸ್ಕೃತಿಯು ನಿಂತಿದೆ. ಹೀಗೆ ದೈವೀ ಪ್ರಸಾದವೇ ಮುಖ್ಯವೆಂದರಿತ ಭಾರತೀಯ ಸಂಸ್ಕೃತಿಯು ಭಾರತೀಯರ ಭಾವನೆಗಳ ಸ್ವರೂಪವನ್ನೇ ಬದಲಾಯಿಸಿತು. ಈ ಬದಲಾವಣೆಯು ಎರಡು ವಿಧದಲ್ಲಿ ಗೋಚರಿಸಿತು. ದೈವವನ್ನೇ ನಂಬಿ ಪ್ರಯತ್ನಕ್ಕೆ ಸಾಕಷ್ಟು ಗಮನ ಕೊಡದಿರುವುದು ಒಂದು; ಪರಮಾತ್ಮನು ಜಗತ್ತಿನ ಒಡೆಯನು; ಅವನು ಜಗನ್ನಿಯಾಮಕನು; ಆದುದರಿಂದ ವಿಶ್ವದ ಹಿತ ಸಾಧನೆಯು ಮುಖ್ಯವೆಂಬುದು ಇನ್ನೊಂದು.

ದೇವರ ಒಲುಮೆಯನ್ನು ಪಡೆಯಲೆಂದು ನಿರಾಕಾರನೂ, ನಿತ್ಯನೂ, ನಿರ್ವಿಕಾರಿಯೂ ಆದ ಪರಮಾತ್ಮನಿಗೆ ಬೇರೆ ಬೇರೆ ರೂಪುಗಳನ್ನು ಕೊಡಲಾಯಿತು. ಹೀಗೆ ರೂಪು ಕೊಡುವುದು

ಇಲ್ಲವೆ ಆಕಾರಗಳನ್ನು ಕಲ್ಪಿಸುವುದು ವಿವಿಧ ಪಂಥದವರಿಗೆ ವಿವಿಧ ತೆರನಾಗಿಯೂ ವಿವಿಧ ಜೀವನಾಧಾರಗಳಿಗೆ ವಿವಿಧ ಪ್ರಕಾರವಾಗಿಯೂ ಬಳಕೆಯಲ್ಲಿ ಬಂದಿತು. ಹೀಗೆ ದೇವರು ಒಬ್ಬನೇ ಆದರೂ ವಿವಿಧ ಆಕಾರಗಳನ್ನು ಮತ್ತು ಉದ್ದೇಶಗಳನ್ನು ಕಲ್ಪಿಸಿದ್ದರಿಂದ ದೇವರಿಗೆ ವಿವಿಧ ಹೆಸರುಗಳುಂಟಾದವು. ಯಾವುದೊಂದು ಕಾರ್ಯವನ್ನು ಆರಂಭಿಸುವ ಮೊದಲು ಆಯಾ ದೇವರುಗಳನ್ನು ಪೂಜಿಸುವ, ಬೇಡಿಕೊಳ್ಳುವ, ಪ್ರಾರ್ಥಿಸುವ ಸಂಪ್ರದಾಯವು ಬೆಳೆಯಿತು. ಕೆಲಸದಲ್ಲಿ ಯಶಸ್ಸು ಲಭಿಸದಿದ್ದರೆ ಹಣೆಬರೆಹ ಇಲ್ಲವೆ ದೈವವನ್ನು ಹಳಿಯುವುದು ಪ್ರಾರಂಭವಾಯಿತು. ಆದರಂತೆ ಯಶಸ್ಸನ್ನು ಸಹ ದೇವರ ಮೇಲೆಯೇ ಹೊರಿಸುವುದು ನಡೆಯಿತು. ಹೀಗೆ ಭಾರತೀಯರ ಜೀವನದಲ್ಲಿ ಕೆಲವು ಸಲ ದೈವೀ ನಂಬಿಕೆಗೆ ಹೆಚ್ಚು ಪ್ರಾಶಸ್ತ್ಯವುಂಟಾಗಿರುವುದನ್ನು ನೋಡುತ್ತೇವೆ. ಆದರೆ ಇದರಿಂದ ಒಂದು ಮಾತು ಮಾತ್ರ ಸ್ಪಷ್ಟವಾಗುತ್ತದೆ. ಮನುಷ್ಯನಲ್ಲಿರುವ ಅಹಂಕಾರ, ಮಮಕಾರಗಳು ಕಡಿಮೆಯಾಗುತ್ತವೆ. 'ಕರ್ಮಣ್ಯೇವಾಧಿಕಾರಸ್ತೆ, ಮಾಫಲೇಷು ಕದಾಚನ' ಎಂಬ ಗೀತೆಯ ವಾಕ್ಯವನ್ನು ಆಧರಿಸಿ ನಮ್ಮ ಸಂಸ್ಕೃತಿಯು ರೂಪಿತವಾಗಿದೆ; ಮತ್ತು ಹಾಗೆ ರೂಪಿತವಾಗಬೇಕು. ಕೆಲಸ ಮಾಡುವುದು ನಮ್ಮದು; ಫಲವನ್ನು ಕೊಡುವುದು ಆ ದೇವ ದೇವನದು. ಫಲಾಪೇಕ್ಷೆಯಿಲ್ಲದೆ ಕೆಲಸವನ್ನು ಮಾಡಬೇಕು, ಅಂದರೆ ಫಲವು ಸಿಕ್ಕೇಸಿಕ್ಕುವುದು; ಆದರೆ ಮಾಡುವ ಕೆಲಸವನ್ನು ಮನಃಪೂರ್ವಕವಾಗಿ ಮಾಡಬೇಕು; ಫಲವನ್ನು ನಿರೀಕ್ಷಿಸದೆ ಕೆಲಸವನ್ನು ಮಾಡಬೇಕು;

ಇದಕ್ಕೆ ವಿರುದ್ಧವಾಗಿ ಫಲವನ್ನು ನಿರೀಕ್ಷಿಸುತ್ತ ಕಾರ್ಯದಲ್ಲಿ ತೊಡಗಿದರೆ ವ್ಯಕ್ತಿಯ ಚಿತ್ತವು ಆ ಫಲದ ಕಡೆಗೇ ಇರುವುದರಿಂದ ಕರ್ತವ್ಯದ ಕಡೆಗೆ ಸಾಕಷ್ಟು ಲಕ್ಷ್ಯಪೂರೈಸಲಾಗುವುದಿಲ್ಲ. ಹೀಗೆ ಲಕ್ಷ್ಯಪೂರೈಸಲಿಕ್ಕೆ ಆಗದಿದ್ದರೆ ಕೆಲಸದಲ್ಲಿ ಸೌಷ್ಟವತೆಯೂ ಮಾರ್ದವತೆಯೂ ಉಂಟಾಗುವುದಿಲ್ಲ; ಕೆಲಸವು ಶೀಘ್ರವಾಗಿ, ಸರಿಯಾಗಿ ನೆರವೇರುವುದಿಲ್ಲ; ಫಲವೂ ಸಹ ಶೀವ್ರ ದೊರೆಯುವುದಿಲ್ಲ, ನಿರೀಕ್ಷಿಸಿದಷ್ಟು ಆ ಕೆಲಸದ ಪ್ರಯೋಜನವೂ ಆಗುವುದಿಲ್ಲ. ಕಾರಣ ಫಲಾಪೇಕ್ಷೆಯಿಲ್ಲದೆ ಕೆಲಸವನ್ನು ಮಾಡಬೇಕು. ನಾವು ನಿಮಿತ್ತ ಮಾತ್ರರು; ಎಲ್ಲವನ್ನೂ ಮಾಡಿಸುವವನು ಬೇರೊಬ್ಬನಿದ್ದಾನೆ; ಅವನು ಕಾಣದ ಕೈಯಾಗಿ, ಚೈತನ್ಯ ಸ್ವರೂಪನಾಗಿ, ವಿಶ್ವದ ಎಲ್ಲ ವ್ಯಾಪಾರಗಳನ್ನೂ, ನಿಸರ್ಗದ ಎಲ್ಲ ಕ್ರಿಯೆಗಳನ್ನೂ, ನಿಯಮಕ್ಕನುಸರಿಸಿ ಸಾಗಿಸುವಂತೆ ಮಾನವನ ಬುದ್ಧಿಯನ್ನೂ, ದೈಹಿಕ ಶಕ್ತಿಯನ್ನೂ, ವೈಚಾರಿಕ ಕ್ರಿಯೆಯನ್ನೂ ಅವನಿಗೆ ಗೊತ್ತಿಲ್ಲದಂತೆ ನಿಯಂತ್ರಿಸುತ್ತಾನೆ. ಅಂಥ ಒಂದು ಚೈತನ್ಯನಲ್ಲಿ ನಂಬಿಕೆಯನ್ನಿಟ್ಟು ನಮ್ಮ ಕಾರ್ಯವನ್ನು ಕಾಯಾ, ವಾಚಾ, ಮನಸಾ ಮಾಡಬೇಕೆಂಬುದೇ ದೈವೀ ಶ್ರದ್ಧೆಯಲ್ಲಿರುವ ಮುಖ್ಯತತ್ತ್ವವಾಗಿದೆ.

ರಾಷ್ಟ್ರೀಯ ಭಾವನೆಯು ಅವಶ್ಯವಾದರೂ ಪರರಾಷ್ಟ್ರಗಳ ಸುಲಿಗೆಯು ಒಳ್ಳೆಯದಲ್ಲವೆಂಬ ಭಾವನೆಯು ಭಾರತೀಯರಲ್ಲಿ ಮೊದಲಿನಿಂದಲೂ ಇದ್ದುದನ್ನು ಕಾಣುತ್ತೇವೆ. ಅತಿಶಯವಾದ ರಾಷ್ಟ್ರೀಯ ಭಾವನೆಯು ಸಂಕುಚಿತ ಭಾವನೆಯೆಂಬ ಕಲ್ಪನೆ

ಯಿತ್ತು; ಈಗಲೂ ಇದೆ. ಇದಕ್ಕಿಂತ ಮಾನವ ಧರ್ಮವೇ ಶ್ರೇಷ್ಠವೆಂದು ತಿಳಿಯಲಾಗಿತ್ತು, ಈಗಲೂ ತಿಳಿಯಲಾಗಿದೆ. "ದೇವರೇ ಧರ್ಮದ ಪ್ರಭು"ಎಂಬ ತತ್ತ್ವದಲ್ಲಿ ವಿಶ್ವಾಸವಿದೆ. ಧರ್ಮದಿಂದ ಬಾಳುವುದು; ಸಕಲ ಪ್ರಾಣಿಗಳಿಗೆ ಲೇಸನ್ನೇ ಬಯಸುವುದು; ಸತ್ಯ ಮಾತಾಡುವುದು; ವಿಶ್ವಪ್ರೇಮದಿಂದ ಹೃದಯವನ್ನು ಬೆಳಗಿಸುವುದು; ಧರ್ಮವನ್ನು ಆಚರಿಸುವುದು ಭಾರತೀಯ ಸಂಸ್ಕೃತಿಯ ಸಾರಸರ್ವಸ್ವವೆಂದು ತಿಳಿಯಲಾಗಿದೆ. ಇಡೀ ವಿಶ್ವವೇ ಒಂದು ಕುಟುಂಬ ಎಂಬ ಭಾವನೆಯ ಪರಿಣಾಮವಾಗಿ ಆರಾಧನಾ ಸ್ವಾತಂತ್ರ್ಯವೂ, ವಿಚಾರ ಸ್ವಾತಂತ್ರ್ಯವೂ ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯಗಳಾಗಿವೆ. ಭಾರತೀಯರಲ್ಲಿ ಇರುವಷ್ಟು ಅನ್ಯಮತ ಸಹಿಷ್ಣುತೆಯು ಬೇರಾರಲ್ಲಿಯೂ ಕಂಡು ಬರಲಿಕ್ಕಿಲ್ಲ. ಭಾರತವು ಸರ್ವ ಧರ್ಮಗಳನ್ನು ಸಮನ್ವಯಗೊಳಿಸಿದ ದೇಶ. ನಮ್ಮ ದೇಶದಲ್ಲಿರುವಷ್ಟು ಜಾತಿ, ಮತ, ಪಂಥಗಳು ಬೇರೆಲ್ಲಿಯೂ ಇರಲಿಕ್ಕಿಲ್ಲ. ಆದರೆ ಹಲವಾರು ವರ್ಷಗಳಿಂದ ಎಲ್ಲ ಮತದವರೂ ಹೊಂದಾಣಿಕೆಯಿಂದ ಬಾಳಿರುವುದನ್ನು ಕಾಣುತ್ತೇವೆ.

ಭಾರತೀಯ ಸಂಸ್ಕೃತಿಯು ಸರ್ವರಿಗೂ ಸ್ವಾಗತ ಬಯಸುವ ಉಚ್ಚಮಟ್ಟದ ಸಂಸ್ಕೃತಿಯಾಗಿದೆ. ನಮ್ಮ ದೇಶದಲ್ಲಿ ಮೊದಲು ದ್ರಾವಿಡರಿದ್ದರೆಂದೂ ಬಳಿಕ ಆರ್ಯರು ಆಗಮಿಸಿದರೆಂದೂ ತಿಳಿಯುತ್ತದೆ. ಆರ್ಯರು ಇಲ್ಲಿಯೇ ನೆಲೆನಿಂತುದರಿಂದ ಮೊದಮೊದಲು ಅವರೀರ್ವರಲ್ಲಿ ಯುದ್ಧಗಳು ಸಂಭವಿಸಿದ್ದು

ವೆಂದೂ, ಬರಬರುತ್ತ ಕೂಡಿ ಬಾಳುವುದು ಎರಡೂ ಜನಾಂಗದ ವರಿಗೆ ಅನಿವಾರ್ಯವಾದುದರಿಂದ ಯುದ್ಧಮಾಡುವುದನ್ನು ಬಿಟ್ಟರೆಂದೂ, ಪರಸ್ಪರ ಸಹಕಾರದಿಂದ, ಸೌಹಾರ್ದತೆಯಿಂದ ಕೂಡಿಕೊಂಡು ಇರಹತ್ತಿದರೆಂದೂ ಕಂಡುಬರುತ್ತದೆ ಇದರಿಂದ ಮೂಲ ದ್ರಾವಿಡ ಸಂಸ್ಕೃತಿ ಹಾಗೂ ಪರಂಪರೆಗಳು ಆರ್ಯರ ಸಂಸ್ಕೃತಿ ಮತ್ತು ಸಂಪ್ರದಾಯಗಳೊಡನೆ ಬೆರೆತು ಹಿಂದೂ ಸಂಸ್ಕೃತಿಯು ರೂಪುಗೊಂಡಿತೆಂದು ಹೇಳಬಹುದು. ಇದುವೇ ಭಾರತೀಯ ಸಂಸ್ಕೃತಿಯ ಬುನಾದಿಯೆಂದು ಊಹಿಸಬಹುದು. ಮುಂದೆ ಬೌದ್ಧ ಧರ್ಮದ ಉದಯವಾಯಿತು. ಧರ್ಮೈಕ ನಿಷ್ಠೆಯಲ್ಲಿ ಪ್ರವೀಣರಾದ ಬೌದ್ಧರು ತಮ್ಮದೇ ಆದ ಕೊಡುಗೆ ಯನ್ನು ಅಂದಿನ ಹಿಂದೂ ಸಂಸ್ಕೃತಿಗೆ ನೀಡಿದರು. ಬಳಿಕ ಜೈನ ಧರ್ಮವು ತಲೆಯೆತ್ತಿತು; ಕೆಲ ಕಾಲ ಪ್ರಾಬಲ್ಯವನ್ನೂ ಪಡೆ ಯಿತು. ಈ ಧರ್ಮದ ಮುಖ್ಯ ತತ್ತ್ವವಾದ ಅಹಿಂಸೆಯು ಹಿಂದೂ ಸಂಸ್ಕೃತಿಗೆ ಅಮೂಲ್ಯವಾದ ಕೊಡುಗೆಯಾಗಿ ಪರಿಣಮಿ ಸಿತು. ಹೀಗೆ ಮೂಲ ದ್ರಾವಿಡರಿಂದ ಹೊರಟ ಹಿಂದೂ ಸಂಸ್ಕೃತಿ ಯೆಂಬ ಝರಿಯು ಕಾಲಚಕ್ರದಲ್ಲಿ ಪ್ರವಾಹಿಸುತ್ತ ಮುಂದೆ ಮುಂದೆ ಸಾಗಿದಂತೆ ಆರ್ಯ, ಬೌದ್ಧ, ಜೈನ, ಸಂಸ್ಕೃತಿಗಳನ್ನೂ ಕೆಲಮಟ್ಟಿಗೆ ಇತರ ಮತೀಯರ ಸತ್ಪರಂಪರೆಗಳನ್ನೂ, ತತ್ತ್ವ ಗಳನ್ನೂ, ವಿಚಾರಗಳನ್ನೂ ಕೂಡಿಕೊಂಡು ಭಾರತೀಯ ಸಂಸ್ಕೃತಿ ಯೆಂಬ ಅಭಿದಾನವನ್ನು ತಾಳಿ ಬೃಹತ್‌ನದಿಯಾಗಿ ಹರಿದು ಬಂದಿದೆ. ಕಾಲಕ್ರಮದಲ್ಲಿ ಶಂಕರಾಚಾರ್ಯ, ಮಧ್ವಾಚಾರ್ಯ ರಂಥ ಗುರುಗಳೂ, ಭಕ್ತಿಭಾಂಡಾರಿ ಬಸವಣ್ಣನವರಂಥ

ಮಹಾನುಭಾವರೂ, ಕನಕದಾಸ, ಪುರಂದರದಾಸ, ಜ್ಞಾನದೇವ ತುಕಾರಾಮರಂಥ ದಾಸವರೇಣ್ಯರೂ ಹಾಗೂ ಸತ್ಯವರೇಣ್ಯರೂ ಜನಿಸಿ ಭಾರತೀಯ ಸಂಸ್ಕೃತಿಯನ್ನು ಉಳಿಸಿ, ಬೆಳೆಸಿ, ಪೋಷಿಸಿದರು; ಹೆಚ್ಚಿನ ಮೆರುಗನ್ನು ಕೊಟ್ಟರು. ಈ ಎಲ್ಲ ಮಹಾನ್ ವ್ಯಕ್ತಿಗಳ ವಿಚಾರ ಪ್ರಣಾಲಿಕೆಯಲ್ಲಿ ಪ್ರವಹಿಸಿದ ಭಾರತೀಯ ಸಂಸ್ಕೃತಿಯು ಹೆಚ್ಚು ನಯವಾಗಿ, ಉಜ್ವಲವಾಗಿ, ಶೋಭಾಯಮಾನವಾಗಿ ವಿಶಾಲವಾಗಿ ಹೊರಹೊಮ್ಮಿತು; ಪರಿಪುಷ್ಟವಾಗಿ ಬೆಳೆಯಿತು. ಕಾಲಪ್ರವಾಹದಲ್ಲಿ ಪರಧರ್ಮೀಯರ ಹಾಗೂ ಪರಕೀಯರ ಆಘಾತಗಳನ್ನೂ, ವಿಪ್ಲವಗಳನ್ನೂ, ರಾಜಕೀಯ ಒತ್ತಡವನ್ನೂ, ಎದುರಿಸಿತು. ಅವರವರ ಸಂಸ್ಕೃತಿಯಲ್ಲಿಯ ಒಳ್ಳೆಯದನ್ನು ತೆಗೆದುಕೊಂಡು ತನ್ನದನ್ನಾಗಿ ಮಾಡಿಕೊಂಡಿತು. ಆದರೆ ಆ ಪರಕೀಯ ಸಂಸ್ಕೃತಿಗಳ ಸೆಳವಿಗೆ ಸಿಕ್ಕು ಕೊಚ್ಚಿ ಹೋಗಲಿಲ್ಲ. ಇದು ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯವಾಗಿದೆ. ಅದರ ಹೃದಯದ ಬಾಗಿಲುಗಳು ಯಾವಾಗಲೂ ತೆರೆದಿದ್ದುವು. ಎಲ್ಲ ದಿಕ್ಕುಗಳಿಂದಲೂ ಗಾಳಿ-ಬೆಳಕುಗಳಾಡುವಂತೆ ಕಿಡಿಕಿ ಬಾಗಿಲುಗಳನ್ನು ತೆರೆದಿಟ್ಟ ಮಂದಿರವು ಶುಭ್ರ ಹವೆ, ಬೆಳಕುಗಳಿಂದ ಕೂಡಿ ಆಹ್ಲಾದಕರವಾಗಿ, ಆರೋಗ್ಯಕರವಾಗಿ ಪರಿಣಮಿಸುವಂತೆ ಭಾರತೀಯ ಸಂಸ್ಕೃತಿಯು ವಿವಿಧ ಸಂಸ್ಕೃತಿಗಳಲ್ಲಿರುವ ಒಳ್ಳೆಯದೆಲ್ಲವನ್ನೂ ತೆಗೆದುಕೊಳ್ಳುತ್ತ ಬಂದಿದೆ. ಹೀಗಿದ್ದರೂ ಅದು ಮೇಲೆ ಹೇಳಿದಂತೆ ಕೊಚ್ಚಿ ಹೋಗಲಿಲ್ಲ; ತನ್ನತನವನ್ನು ಕಳೆದುಕೊಳ್ಳಲಿಲ್ಲ. ಇಸ್ಲಾಂ ಸಂಸ್ಕೃತಿಯು ಭಾರತೀಯ ಸಂಸ್ಕೃತಿಗೆ ವಿಭಿನ್ನವಾಗಿದ್ದರೂ ಅದರ ಪ್ರವೇಶದಿಂದ ಇದು

(ಭಾರತೀಯ ಸಂಸ್ಕೃತಿಯು) ತನ್ನ ಅಸ್ತಿತ್ವವನ್ನು ಕಳೆದುಕೊಳ್ಳಲಿಲ್ಲ. ಮಧ್ಯಪ್ರಾಚ್ಯವನ್ನು ಇಸ್ಲಾಂ ಸಂಸ್ಕೃತಿಯು ಆಕ್ರಮಿಸಿತು. ಭಾರತದಲ್ಲಿ ಇದು ಸಾಧ್ಯವಾಗಲಿಲ್ಲ. ತದ್ವಿರುದ್ಧವಾಗಿ ರಾಮಾಯಣ, ಮಹಾಭಾರತ ಮೊದಲಾದ ಹಿಂದೂ ಪುರಾಣೇತಿಹಾಸಗಳಿಂದ ಪ್ರಭಾವಿತರಾದ ಉಸ್ತಾದ ಮನ್‌ಸೂರ; ಫರೂಕ್, ಅಬ್ದುಲ್ ಸಮ್ಮದ, ಸೈಯ್ಯದ ಅಲಿ ಅವರು ಈ ಪುರಾಣಗಳಿಂದ ವಿಷಯಗಳನ್ನಾಯ್ದುಕೊಂಡು ಚಿತ್ರಗಳನ್ನು ಬರೆದರು. ಅಕಬರ ಬಾದಶಹನು ಹಿಂದೂ ಧರ್ಮದ ಅಭಿಮಾನಿಯಾಗಿದ್ದನೆಂದೂ, ದಾರಾಫುಕೋನು ದಿನಾಲು ವೇದೋಪನಿಷತ್ತುಗಳನ್ನು ಪಾರಾಯಣ ಮಾಡುತ್ತಿದ್ದನೆಂದೂ ತಿಳಿಯುತ್ತದೆ. ಮುಸ್ಲಿಂನಾಗಿ ಹುಟ್ಟಿದರೂ ಕಬೀರನು ರಾಮನಾಮದ ಮಹಿಮೆಯನ್ನು ಸಾರಿದನು. ಶಿಶುನಾಳ ಶರೀಫಸಾಹೇಬರು ತಮ್ಮ ಗುರುವಾದ ಗೋವಿಂದಭಟ್ಟರಲ್ಲಿ ಅಚಲ ಭಕ್ತಿಯುಳ್ಳವರಾಗಿದ್ದರು. ಹೀಗೆ ಭಾರತೀಯ ಸಂಸ್ಕೃತಿಯು ವಿಭಿನ್ನ ಸಂಸ್ಕೃತಿಯವರಿಂದ ಗೌರವವನ್ನು ಪಡೆದಿದೆ. ವಿಜಯನಗರ ಸಾಮ್ರಾಜ್ಯವು ಅಚ್ಚ ಭಾರತೀಯ ಸಂಸ್ಕೃತಿಯನ್ನು ಪೋಷಿಸಿಕೊಂಡು ಬಂದಿತು. ಕೆಲವು ಸಂದರ್ಭಗಳಲ್ಲಿ ಭಾರತೀಯ ಸಂಸ್ಕೃತಿಯು ಹೊರಗಿನವರ ಸಂಸ್ಕೃತಿಗೆ ಮರುಳಾಗಿರಬಹುದು. ವಿಶೇಷವಾಗಿ ಆಂಗ್ಲ ಸಂಸ್ಕೃತಿಯ ಸಂದರ್ಭದಲ್ಲಿ ಇದನ್ನು ಕಾಣಬಹುದು. ಆದರೆ ಅಂತಹ ಪ್ರಭಾವಕ್ಕೆ ಒಳಗಾಗಿದ್ದುದು ತಾತ್ಕಾಲಿಕ. ಕೆಲ ಸಮಯದ ಅನಂತರ ಈ ಪ್ರಭಾವವನ್ನು ಕಳಚಿ ತನ್ನತನವನ್ನು ಉಳಿಸಿಕೊಂಡಿರುವುದನ್ನು ಕಾಣಬಹುದು.

ಭಾರತೀಯ ಸಂಸ್ಕೃತಿಯು ಭದ್ರ ತಳಹದಿಯ ಮೇಲೆ ನಿಂತಿದೆ. ರೋಮನ್ ಸಂಸ್ಕೃತಿ, ಗ್ರೀಕ ಸಂಸ್ಕೃತಿಗಳು ಇತರ ದೇಶಗಳ ಸಂಸ್ಕೃತಿಗೆ ಒಳಗಾಗಿ ತಮ್ಮತನವನ್ನು ಕಳೆದು ಕೊಂಡಿವೆಯೆಂದು ತಿಳಿದುಬರುತ್ತದೆ. ಆದರೆ ಭಾರತವು ತನ್ನ ಸಂಸ್ಕೃತಿಯ ವೈಶಿಷ್ಟ್ಯವನ್ನು ಕಳೆದುಕೊಳ್ಳಲಿಲ್ಲ. ಭಾರತೀಯರು ಸುಸಂಸ್ಕೃತರಾಗಿದ್ದರೆಂಬುದನ್ನು ವಿದೇಶೀಯರು ಹಲವು ಬಗೆಯಾಗಿ ವರ್ಣಿಸಿದ್ದಾರೆ. "ಯಾವ ಭಾರತೀಯನೂ ಸುಳ್ಳು ಮಾತಾಡುತ್ತಿದ್ದನೆಂಬ ಬಗೆಗೆ ಯಾರೂ ದೂರಿರುವುದಿಲ್ಲ" ಎಂದು ಏರಿಯೇನು ಹೇಳಿದರೆ, "ಈ ಜನರ ಸತ್ಯವರ್ತನೆ ಇವರಿಗೆ ಗೌರವ ತರುತ್ತದೆ" ಎಂದು ಚೀನೀ ಪ್ರವಾಸಿಕ ಹುಯೆನ್ ಚಾಂಗನು ಹೇಳಿದ್ದಾನೆ. ಭಾರತೀಯ ವ್ಯಾಪಾರಸ್ಥರು ಜಗತ್ತಿನಲ್ಲಿಯೇ ಅತ್ಯಂತ ಒಳ್ಳೆಯವರಾದ, ಸತ್ಯವಂತರಾದ, ಪ್ರಾಮಾಣಿಕರಾದ, ವ್ಯಾಪಾರಸ್ಥರು" ಎಂದು ಮಾರ್ಕೋ ಪೋಲೋನು ಉಲ್ಲೇಖಿಸಿದ್ದಾನೆ. "ಭಾರತೀಯರಲ್ಲಿ ಕಟ್ಟು ಹರಿದ ದುರಾಚಾರವಿಲ್ಲ, ಇವರು ಪರಿಶುದ್ಧ ನಡತೆಯಲ್ಲಿ ನಮಗಿಂತ ಮಿಗಿಲು, ಇವರ ಈ ಮೇಲ್ಮೆ ನಮ್ಮ ಹೆಮ್ಮೆಯನ್ನು ಕುಗ್ಗಿಸುವಂಥದ್ದಾಗಿದೆ" ಎಂದು ಮೌಂಟಸ್ಟುಅರ್ಟ ಎಲ್ಫಿನ್ ಸ್ಟನ್ನನು ವರ್ಣಿಸಿದರೆ, "ಇವರು ಸ್ತ್ರೀಯರನ್ನು ನಂಬಿಕೆಯಿಂದ, ಗೌರವದಿಂದ, ದಾಕ್ಷಿಣ್ಯದಿಂದ, ನಡೆಸಿಕೊಳ್ಳುತ್ತಾರೆ" ಎಂದು ಸರ್ ಥಾಮಸ್ ಮನ್ರೋನು ಹೇಳಿದ್ದಾನೆ.

'ಸತ್ಯಂ ಶಿವಂ ಸುಂದರಂ'ಎಂಬ ತ್ರಿವೇಣಿ ಸಂಗಮದ ಧ್ಯೇಯವನ್ನು ಸಾಧಿಸಲು ಹೊರಟ ನಮ್ಮ ಸಂಸ್ಕೃತಿಯು ಸರ್ವ

ಶ್ರೇಷ್ಠ ಸಂಸ್ಕೃತಿಯಾಗಿದೆ. ಇತರ ದೇಶಗಳ ಜನರು ಈ ಮೂರೂ ಧ್ಯೇಯಗಳನ್ನು ಬೇರ್ಪಡಿಸಿದ್ದಾರೆ; ಒಂದೊಂದು ಗುಂಪಿನವರು ಒಂದೊಂದನ್ನು ಸಾಧಿಸುವರೆಂದು ಬಗೆದಿದ್ದಾರೆ. ಸತ್ಯಾನ್ವೇಷಣವು ತತ್ತ್ವಶಾಸ್ತ್ರಜ್ಞರ ಕೆಲಸವೆಂದೂ, ಸೌಂದರ್ಯೋಪಾಸನೆಯು ಸಾಹಿತಿಗಳಿಗೆ ಹಾಗೂ ಕಲೆಗಾರರಿಗೆ ಸೇರಿದುದೆಂದೂ, 'ಶಿವಂ' ಧ್ಯೇಯವು ಸಾಧು-ಸಂತರು ಸಾಧಿಸತಕ್ಕದೆಂದೂ, ವಿದೇಶೀಯರು ಭಾವಿಸಿದ್ದಾರೆ. ಸತ್ಯವೇ ಶಿವನೆಂದೂ, ಸೌಂದರ್ಯವೇ ಶಿವನೆಂದೂ, ಸತ್ಯ, ಸೌಂದರ್ಯ, ಶಿವ ಇವು ಒಂದಕ್ಕೊಂದು ತಳುಕುಮುಳುಕಾಗಿರುವುವೆಂದೂ ಅವರು ಅರಿತಿರುವರೆಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಭಾರತದಲ್ಲಿ ಈ ಮೂರೂ ಧ್ಯೇಯಗಳನ್ನು ಒಟ್ಟಾರೆ ಸಾಧಿಸುವ ಮನೋಭೂಮಿಕೆಯಿದೆ. ಸಾಮಾನ್ಯ ಜನತೆಯು ಸಹ ಈ ಮೂರೂ ಗುರಿಗಳನ್ನು ಒಟ್ಟಾಗಿಯೇ ಸಾಧಿಸಲು ಗಮನಕೊಟ್ಟಿತು. ಎಲ್ಲರೂ ಸತ್ಯಸಂಧರಾಗಬೇಕು, ಕಲೋಪಾಸಕರಾಗಬೇಕು, ಆಧ್ಯಾತ್ಮವಾದಿಗಳಾಗಬೇಕೆಂಬುದು ಭಾರತೀಯ ಸಂಸ್ಕೃತಿಯ ಕರೆಯಾಗಿದೆ.

ಭಾರತೀಯ ಸಂಸ್ಕೃತಿಯು ನಮ್ಮ ಜನರ ಧಾರ್ಮಿಕ ಶ್ರದ್ಧೆ, ಪರಾಕ್ರಮ, ಶಿಕ್ಷಣಾಭಿಮಾನ, ಔದಾರ್ಯ, ಸ್ವಾಮಿನಿಷ್ಠೆ ವೈರಾಗ್ಯ ಜೀವನಗಳ ಹಿನ್ನೆಲೆಯಾಗಿದೆ. ಈಗಲೂ ಸಹ ನಮ್ಮವರು ಕೈಕೊಳ್ಳುವ ದೇಶಪರ್ಯಟನ, ಮಾಡುವ ತೀರ್ಥಯಾತ್ರೆ, ಆಚರಿಸುವ ಹಬ್ಬ-ಹುಣ್ಣಿವೆ, ಜರುಗಿಸುವ ಜಾತ್ರೆ-ಉತ್ಸವಗಳು, ನೆರವೇರಿಸುವ ಮದುವೆ-ಮುಂಜಿಗಳಲ್ಲಿ ನಮ್ಮ

ಸಂಸ್ಕೃತಿಯನ್ನು ಕಾಣುತ್ತೇವೆ. ಯುಗಾದಿಯಂದು ಬೇವು-ಬೆಲ್ಲ ತಿನ್ನುವುದು, ನಾಗಪಂಚಮಿಯಂದು ಮಣ್ಣಿನ ನಾಗಪ್ಪನಿಗೆ ಹಾಲು ಎರೆಯುವುದು, ವಿಜಯ ದಶಮಿಯಂದು ಬನ್ನೀಮುಡಿ ಯುವುದು, ಶಿವರಾತ್ರಿಯಂದು ಜಾಗರಣೆ ಮಾಡುವುದು-ಇತ್ಯಾದಿ ಆಚರಣೆಗಳು ನಮ್ಮ ಸಂಸ್ಕೃತಿಯ ದ್ಯೋತಕಗಳಾಗಿವೆ.

ವಿವಿಧತೆಯಲ್ಲಿ ಏಕತೆಯನ್ನು ಕಾಣುವುದು ಭಾರತೀಯ ಸಂಸ್ಕೃತಿಯ ಇನ್ನೊಂದು ವೈಶಿಷ್ಟ್ಯವಾಗಿದೆ. ನಮ್ಮ ದೇಶದಲ್ಲಿ ಹಲವಾರು ಭಾಷೆಗಳಿವೆ; ವಿವಿಧ ಪಂಥಗಳಿವೆ. ಬೇರೆ ಬೇರೆ ಬಗೆಯ ಊಟೋಪಚಾರಗಳನ್ನೂ, ಸಂಪ್ರದಾಯಗಳನ್ನೂ, ರೀತಿ-ನೀತಿಗಳನ್ನೂ ಹೊಂದಿದ ಜನರಿದ್ದಾರೆ. ಹೀಗಿದ್ದರೂ ಎಲ್ಲರ ಭಾವನೆ ಒಂದೇ ಆಗಿದೆ; ಅಂತರಂಗ ಒಂದೇ ಇದೆ; ಧರ್ಮ ಒಂದೇ ಆಗಿದೆ. ಇದರಲ್ಲಿಯೇ ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯವಿದೆ. ಕಳೆದ ಹತ್ತು-ಹನ್ನೆರಡು ವರ್ಷಗಳಲ್ಲಿ ಚೀನ ದೊಡನೆ ಮತ್ತು ಪಾಕಿಸ್ತಾನದೊಡನೆ ಜರುಗಿದ ಯುದ್ಧಗಳಲ್ಲಿ ಭಾರತದ ಜನತೆಯು ವ್ಯಕ್ತಪಡಿಸಿದ ಒಕ್ಕಟ್ಟು ನಮ್ಮ ಸಂಸ್ಕೃತಿಯ ದ್ಯೋತಕವಲ್ಲದೆ ಇನ್ನೇನು? ಮಹಾತ್ಮಾ ಗಾಂಧಿ, ಲೋಕಮಾನ್ಯ ಟಿಳಕ, ಮೌಲಾನಾ ಅಬುಲ್‌ಕಲಂ ಆಜಾದ್, ಸಿ.ವ್ಹಿ. ರಾಮನ್, ಜವಾಹರಲಾಲ ನೆಹರೂ, ಸುಭಾಸಚಂದ್ರ ಭೋಸ, ಡಾ. ರಾಜೇಂದ್ರಪ್ರಸಾದ, ಲಾಲಬಹದ್ದೂರ ಶಾಸ್ತ್ರಿ, ಎಂ. ವಿಶ್ವೇಶ್ವರಯ್ಯ, ಡಾ. ರಾಧಾಕೃಷ್ಣನ್ ಮೊದಲಾದ ಮಹಾಪುರುಷರು ಬೇರೆ ಬೇರೆ ರಾಜ್ಯದವರಾದರೂ ಭಾರತದ

ಸ್ವಾತಂತ್ರ್ಯಕ್ಕೆ ಹಾಗೂ ಏಳ್ಗೆಗೆ ಶ್ರಮಿಸಲಿಲ್ಲವೆ? ಹೀಗೆ ಭಾರತದ ಪ್ರಜೆಗಳು ನಿತ್ಯ ವ್ಯವಹಾರದಲ್ಲಿ ತಮ್ಮವೇ ಆದ ರೂಢಿ-ಪರಂಪರೆಗಳನ್ನು ಅನುಸರಿಸಿದರೂ ಸಹ ಅಂತರಂಗದಲ್ಲಿ ಭಾರತೀಯ ಸಂಸ್ಕೃತಿಯ ತತ್ತ್ವಗಳನ್ನೂ, ಆದರ್ಶಗಳನ್ನೂ ಪಾಲಿಸುತ್ತಿರುವರೆಂದು ಹೇಳಬಹುದು. ಒಟ್ಟಿನಲ್ಲಿ "ಭಾರತೀಯ ಸಂಸ್ಕೃತಿಯಿಂದ ಪ್ರಪಂಚಕ್ಕೆ ಮಹತ್ವದ ಸೇವೆಯು ಸಲ್ಲುವುದು" ಎಂದು ಮಹಾತ್ಮಾ ಗಾಂಧೀಜಿಯವರು ಹೇಳಿದುದರಲ್ಲಿ ಸಂಪೂರ್ಣ ಸತ್ಯವಿದೆ.

೯. ಶಿಕ್ಷಣ–ಸಂಸ್ಕೃತಿ ಸಮನ್ವಯ

ಇಲ್ಲಿಯವರೆಗೆ ಶಿಕ್ಷಣ ಮತ್ತು ಸಂಸ್ಕೃತಿಗಳನ್ನು ಕುರಿತು ವಿವರವಾಗಿ ಚರ್ಚಿಸಿದೆವು. ಇಲ್ಲಿ ಅವುಗಳ ಸಮನ್ವಯದ ಬಗೆಗೆ ಕೆಲವು ಮಾತುಗಳನ್ನು ಹೇಳುವುದು ಸೂಕ್ತವೆನಿಸುತ್ತದೆ. ಶಿಕ್ಷಣ–ಸಂಸ್ಕೃತಿಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಮಾನವನ ಏಳ್ಗೆಗೆ, ಜಗತ್ತಿನ ಸುಖ, ಶಾಂತಿ, ಸಮೃದ್ಧಿಗೆ ಇವೆರಡೂ ಅಗತ್ಯ. ಶಿಕ್ಷಣವು ಸಾಧನ (Means) ಆದರೆ ಸಂಸ್ಕೃತಿಯು ಸಿದ್ಧಿಯೆನಿಸುತ್ತದೆ. ಶಿಕ್ಷಣದ ಸಾಧನಗಳಾದ ಮನೆ, ಶಾಲೆ, ಗ್ರಂಥಾಲಯ, ವರ್ತಮಾನ ಪತ್ರ (Press), ಉಪನ್ಯಾಸಗಳು, ಕೀರ್ತನ–ಪುರಾಣಗಳು, ನಾಟಕ, ಸಿನೇಮಾ ಮೊದಲಾದವುಗಳು ಉತ್ತಮ ಶಿಕ್ಷಣವನ್ನು ಜನತೆಗೆ ನೀಡಿದರೆ ಆ ಜನತೆಯ ಭೌತಿಕ ಹಾಗೂ ಆಧ್ಯಾತ್ಮಿಕ ಮಟ್ಟಗಳು ಎತ್ತರವಾಗುವುದರಲ್ಲಿ ಸಂದೇಹವಿಲ್ಲ. ಒಳ್ಳೆಯ ಶಿಕ್ಷಣದಿಂದ ಒಳ್ಳೆಯ ಸಂಸ್ಕೃತಿಯು ರೂಪುಗೊಳ್ಳುತ್ತದೆ. ಈ ಹಿಂದೆ ಹೇಳಿದಂತೆ ಪುಸ್ತಕೀಯ ಜ್ಞಾನವು ಶಿಕ್ಷಣವಾಗಿರದೆ ಈ ಜ್ಞಾನವನ್ನು ನೀಡುವುದು ಶಿಕ್ಷಣದ ಗುರಿಯಾಗಿರದೆ ಮಕ್ಕಳ ಶೀಲಸಂವರ್ಧನೆಯು ಅದರ ಗುರಿಯಾಗಿರಬೇಕು. ಸತ್ಯ, ಪ್ರಾಮಾಣಿಕತನ, ಕರ್ತವ್ಯಶೀಲತೆ, ಶ್ರಮಗೌರವ, ಅಹಿಂಸೆ,

ರಾಷ್ಟ್ರಪ್ರೇಮ, ವಿಶ್ವಬಂಧುತ್ವ ಮೊದಲಾದ ಲೋಕೋತ್ತರ ಗುಣಗಳಿಂದ ಕೂಡಿದ ವ್ಯಕ್ತಿಗಳನ್ನು ತಯಾರಿಸುವುದು-ಅಂದರೆ ಸುಸಂಸ್ಕೃತ ಜನರನ್ನು ತಯಾರಿಸುವುದು ಶಿಕ್ಷಣದ ಗುರಿಯಾಗಿ ರಬೇಕು.

ಸುಸಂಸ್ಕೃತ ಜನಾಂಗವನ್ನು ತಯಾರಿಸಬೇಕಾದರೆ ಶಿಕ್ಷಣ ದಲ್ಲಿ ನಮ್ಮ ಸಂಸ್ಕೃತಿಯ ಎಳೆಗಳು ಸಮಾವೇಶಗೊಳ್ಳಬೇಕು. ಭಾರತೀಯ ಸಂಸ್ಕೃತಿಯ ಪ್ರಾಚೀನತೆ, ಅದು ಬೆಳೆದುಬಂದ ರೀತಿ-ನೀತಿ, ಅದರ ವೈಶಿಷ್ಟ್ಯಗಳನ್ನು ಶಿಕ್ಷಣಕ್ರಮದಲ್ಲಿ ಅಳವಡಿಸಬೇಕು. ಅಂದರೆ ಮಾತ್ರ ನಮ್ಮ ಸಂಸ್ಕೃತಿಯ ಬಗೆಗೆ ಆದರಾಭಿಮಾನಗಳು ಮಕ್ಕಳಲ್ಲಿ ಉದಯಿಸುವವು.

ಈ ದೃಷ್ಟಿಯಿಂದ ನೋಡಿದರೆ ಸಂಸ್ಕೃತಿಯು ಶಿಕ್ಷಣದ ತಳಹದಿಯಾಗಬೇಕು. ಸಂಸ್ಕೃತಿಯ ಭದ್ರ ಬುನಾದಿಯ ಮೇಲೆ ರೂಪಿತವಾದ ಶಿಕ್ಷಣವು ತನ್ನನ್ನೂ ಪೋಷಿಸುವುದಲ್ಲದೆ ಸಂಸ್ಕೃತಿಯನ್ನೂ ಪೋಷಿಸುತ್ತದೆ. ಇಂತಹ ಶಿಕ್ಷಣವನ್ನು ಪಡೆದ ನಾಗರಿಕರು ಸುಸಂಸ್ಕೃತರೆಂದೆನಿಸುವರು. ಕಾರಣ ಶಿಕ್ಷಣ ಮತ್ತು ಸಂಸ್ಕೃತಿ ಇವು ಒಂದಕ್ಕೊಂದು ಪೂರಕವಾಗಿವೆ; ಪರಿಪೋಷಕವಾಗಿವೆ; ಮೈಸೂರಿನ ಗಂಡಭೇರುಂಡದಂತೆ, ನಾಣ್ಯದ ಎರಡು ಮುಖಗಳಂತೆ ಅವಿಚ್ಛಿನ್ನವಾಗಿವೆ.

ಪೌರಾಣಿಕ ಹಾಗೂ ಐತಿಹಾಸಿಕ ಕಥೆಗಳಲ್ಲಿ ಧಾರ್ಮಿಕ ನಡತೆಯನ್ನೂ, ಭ್ರಾತೃಪ್ರೇಮವನ್ನೂ, ಮಾತಾ-ಪಿತೃ ಭಕ್ತಿ

ಯನ್ನೂ, ದೈವೀಶ್ರದ್ಧೆಯನ್ನೂ, ಸ್ವಾಮಿನಿಷ್ಠೆಯನ್ನೂ ಕರ್ತವ್ಯ ಪಾಲನೆಯನ್ನೂ ವಚನಪಾಲಿಸುವಿಕೆಯನ್ನೂ, ರಾಷ್ಟ್ರಾಭಿಮಾನ ವನ್ನೂ, ವಿಶ್ವಬಂಧುತ್ವವನ್ನೂ ಕಾಣುತ್ತೇವೆ. ಧರ್ಮರಾಜನ ಧಾರ್ಮಿಕ ನಡೆವಳಿಕೆ, ಭರತನ ಬಂಧುಪ್ರೇಮ, ಶ್ರವಣನ ಮಾತಾ-ಪಿತೃಭಕ್ತಿ, ಆರುಣಿಯ ಗುರು ಭಕ್ತಿ, ಕರ್ಣನ ಸ್ವಾಮಿ ನಿಷ್ಠೆ, ಹರಿಶ್ಚಂದ್ರನ ಸತ್ಯಸಂಧತೆ, ಶ್ರೀ ರಾಮಚಂದ್ರನ ಕರ್ತವ್ಯ ಹಾಗೂ ವಚನ ಪಾಲಿಸುವಿಕೆ, ಲೋಕಮಾನ್ಯಟಿಳಕ, ಮಹಾತ್ಮಾ ಗಾಂಧಿ, ಜವಾಹರಲಾಲ ನೆಹರೂ ಮೊದಲಾದವರ ರಾಷ್ಟ್ರಾಭಿಮಾನ; ಮಹಾತ್ಮಾ ಗಾಂಧಿಜಿಯವರ ವಿಶ್ವಬಂಧುತ್ವ ಇವೆಲ್ಲ ಭಾರತೀಯ ಸಂಸ್ಕೃತಿಯ ಸೆಲೆಗಳಾಗಿವೆ. ಇಂತಹ ಮಹಾನ್ ವ್ಯಕ್ತಿಗಳ ಚರಿತ್ರೆಗಳನ್ನೂ, ಕಥೆಗಳನ್ನೂ, ಸಾಹಸ ಗಳನ್ನೂ, ಮಕ್ಕಳಿಗೆ ಹೇಳಬೇಕು. ಇದರಂತೆ ವಿದ್ಯಾಭಿಮಾನ, ಔದಾರ್ಯ, ಆತ್ಮಗೌರವ ಹಾಗೂ ಸಂರಕ್ಷಣೆಯ ಕಥೆಗಳನ್ನೂ ವಿವರಿಸಬೇಕು. ಇವೆಲ್ಲವೂ ನಮ್ಮ ಸಂಸ್ಕೃತಿಯನ್ನು ಉಳಿಸಿ, ಬೆಳೆಸಲು ಸಹಾಯಕವಾಗುವುವು.

ನಮ್ಮ ನಾಡಿನಲ್ಲಿರುವ ಶಿಲಾಶಾಸನಗಳು, ತಾಮ್ರ ಶಾಸನ-ಗಳು ನಮ್ಮ ಪೂರ್ವಜರ ಔದಾರ್ಯ ಹಾಗೂ ತ್ಯಾಗ ಗುಣಗಳನ್ನು ಪ್ರದರ್ಶಿಸಿದರೆ; ವೀರಗಲ್ಲುಗಳು ಪರಾಕ್ರಮವನ್ನೂ, ಮಹಾ ಸತಿ ಕಲ್ಲುಗಳು ಅಂದಿನ ಸ್ತ್ರೀಯರ ಪಾತಿವ್ರತ್ಯವನ್ನೂ, ಗೋಗ್ರ-ಹಣಗಲ್ಲುಗಳು ರಾಜಮಹಾರಾಜರ ಮಹಾತ್ವಾಕಾಂಕ್ಷೆಯನ್ನೂ ಇಂದಿಗೂ ಸಾರಿ ಹೇಳುತ್ತಿವೆ. ವಿಜಾಪುರದ ಗೋಲಗುಮ್ಮಟ,

ಆಗ್ರಾದ ತಾಜಮಹಲು, ಹಳೇಬೀಡು, ಬೇಲೂರಗಳಲ್ಲಿಯ ದೇವಾಲಯಗಳು ನಮ್ಮ ಹಿಂದಿನ ಶಿಲ್ಪಿಗಳ ಕಲಾಕೌಶಲ್ಯವನ್ನು ಸ್ಪಷ್ಟವಾಗಿ ನಿರ್ದೇಶಿಸುತ್ತಿವೆ. ಇವೆಲ್ಲವೂ ನಮ್ಮ ಸಂಸ್ಕೃತಿಯ ಸಾಮರ್ಥ್ಯವನ್ನೂ ಸಜೀವತೆಯನ್ನೂ ವ್ಯಕ್ತಗೊಳಿಸುವ ಸಂಕೇತಗಳಾಗಿವೆ.

ಶಿಕ್ಷಣ ಕ್ರಮದಲ್ಲಿ ಇವೆಲ್ಲವನ್ನೂ ಸಮಾವೇಶಗೊಳಿಸಬೇಕು. ಅಂದರೆ ಮಕ್ಕಳಲ್ಲಿ ನಮ್ಮ ಸಂಸ್ಕೃತಿಯ ಉದಾತ್ತತೆ ಬಹುಮುಖತೆ ಹಾಗೂ ಉಜ್ವಲತೆಗಳ ಅರಿವುಂಟಾಗುವುದು. ಇದರಿಂದ ಮಕ್ಕಳು ಚಿಕ್ಕಂದಿನಿಂದಲೇ ಸುಸಂಸ್ಕೃತರಾಗಿ ಬೆಳೆಯುತ್ತಾರೆ. ಸುಸಂಸ್ಕೃತ ಸಮಾಜವನ್ನೂ, ರಾಷ್ಟ್ರವನ್ನೂ ನಿರ್ಮಿಸುವುದು ಶಿಕ್ಷಣದ ಧ್ಯೇಯವಾಗಿದೆ.

ಶಿಕ್ಷಣದ ಅಂಗಗಳಾದ ಕಾವ್ಯಾಭ್ಯಾಸ, ಸಾಹಿತ್ಯ ವ್ಯಾಸಂಗದಿಂದಲೂ ಸಹ ಉತ್ತಮ ಸಂಸ್ಕೃತಿಯನ್ನು ಪಡೆಯಬಹುದು. ನಮ್ಮ ರಾಷ್ಟ್ರದಲ್ಲಿ ಆಗಿಹೋದ ಕಾಳಿದಾಸ, ಭವಭೂತಿ, ಪಂಪ, ರನ್ನ, ಹರಿಹರ, ರಾಘವಾಂಕ, ಕುಮಾರವ್ಯಾಸ, ಚಾಮರಸ, ಲಕ್ಷ್ಮೀಶ, ಸರ್ವಜ್ಞ ಮೊದಲಾದ ಕವಿಗಳು ಬರೆದ ಕಾವ್ಯಗಳು ನಮ್ಮ ಸಂಸ್ಕೃತಿಯ ಸಜೀವ ಉಗ್ರಾಣಗಳು. ಅದರಂತೆ ಐತಿಹಾಸಿಕ ಕಾದಂಬರಿಗಳು, ಶರಣರ ವಚನಗಳು, ಮಹಾಪುರುಷರ ಜೀವನ ಚರಿತ್ರೆಗಳು ಶ್ರೇಷ್ಠ ಸಂಸ್ಕೃತಿಯನ್ನು ಒದಗಿಸುತ್ತವೆ.

ಶಿಕ್ಷಣ ಹಾಗೂ ಸಂಸ್ಕೃತಿ ಇವು ಪರಸ್ಪರ ಪೂರ್ವಕವಾಗಿವೆಯೆಂದು ಈ ಮೊದಲೇ ಹೇಳಿದೆಯಷ್ಟೇ! ಉತ್ತಮ ಶಿಕ್ಷಣಕ್ರಮವು ಸುಸಂಸ್ಕೃತರಿಂದ ರೂಪಿಸಲ್ಪಡುತ್ತದೆ. ರಾಜಕೀಯ ಪ್ರಭಾವದಿಂದಲೋ, ಇಲ್ಲವೆ ಬೇರಾವ ಕಾರಣದಿಂದಲೋ ನಾಡಿನ ಶಿಕ್ಷಣವನ್ನು ರೂಪಿಸುವ ಕಾರ್ಯವನ್ನು ಶಿಕ್ಷಣದ ಗಂಧವಿಲ್ಲದವರಿಗೆ, ಅರ್ಧಮರ್ಧ ತಿಳಿವಳಿಕೆಯಿದ್ದವರಿಗೆ, ರಾಜಕೀಯದಲ್ಲಿ ಅಥವಾ ಸಮಾಜದಲ್ಲಿ ಗಣ್ಯ ಸ್ಥಾನ ಪಡೆದವರಿಗೆ ಭಿಡೆ ಮುರವತ್ತುಗಳಿಗೆ ಒಳಗಾಗಿ ಇತರ ಅಯೋಗ್ಯರಿಗೆ ಕೊಡುವುದು ಸರಿಯಲ್ಲ. ರಾಷ್ಟ್ರದ ಭವಿತವ್ಯವನ್ನು ರೂಪಿಸುವ ಶಿಕ್ಷಣವು ಸುಸಂಸ್ಕೃತರಿಂದ, ಶಿಕ್ಷಣತಜ್ಞರಿಂದ, ರೂಪಿ ಸಲ್ಪಡಬೇಕು. ಸುಸಂಸ್ಕೃತರು, ಶಿಕ್ಷಣ ತಜ್ಞರು ರೂಪಿಸಿದ ಶಿಕ್ಷಣವು ಸಂಸ್ಕೃತಿಯ ಅಂಶಗಳನ್ನು ಕೂಡಿಕೊಂಡಿರಬಲ್ಲುದು. ಹೀಗೆ ಉತ್ತಮ ಶಿಕ್ಷಣವನ್ನು ರೂಪಿಸಲಿಕ್ಕೆ ಸುಸಂಸ್ಕೃತರು ಅವಶ್ಯ.

ಶಿಕ್ಷಣದಿಂದ ಸಂಸ್ಕೃತಿಯು ವೃದ್ಧಿಹೊಂದಿದರೆ ಸಂಸ್ಕೃತಿಯಿಂದ ಶಿಕ್ಷಣವು ಉತ್ತಮಗೊಳ್ಳುವುದು. ಆದುದರಿಂದ ಶಿಕ್ಷಣ, ಸಂಸ್ಕೃತಿಗಳೆರಡನ್ನೂ ಸಮನ್ವಯಗೊಳಿಸಬೇಕು. ನವ ಮನ್ವಂತರದ ನಂಬಿಕೆ, ತಿಳಿವಳಿಕೆ, ಜ್ಞಾನಗಳಲ್ಲಿರುವ ಒಳ್ಳೆಯದೆಲ್ಲವನ್ನೂ ಇವುಗಳಲ್ಲಿ ಕೂಡಿಸಬೇಕು. ಹೀಗೆ ಹಳೆಯದು ಮತ್ತು ಹೊಸದು ಇವುಗಳಲ್ಲಿಯ ಶುಭಾಂಶಗಳಿಂದ ಮಿಶ್ರಿತವಾದ ಶಿಕ್ಷಣ-ಸಂಸ್ಕೃತಿ ಸಮನ್ವಯವು ಅನ್ಯೋನ್ಯವಾಗಿ ಪ್ರಾದುರ್ಭವಿಸಿ ತುಂಗಭದ್ರೆಯ ಪುಣ್ಯ ಸಲಿಲದಂತೆ,

ಗಂಗಾ ನದಿಯ ಪವಿತ್ರ ಜಲದಂತೆ ನಮ್ಮ ನಾಡಿನ ಜನಮನವನ್ನು ತಣಿಸಬೇಕು. ಸುಸಂಸ್ಕೃತರು ಹಾಗೂ ಶಿಕ್ಷಣವೇತ್ತರರು ಶಿಕ್ಷಣ-ಸಂಸ್ಕೃತಿಗಳ ಸಮನ್ವಯ ಕಾರ್ಯವನ್ನು ಕೈಕೊಂಡು ನಮ್ಮ ರಾಷ್ಟ್ರವು ಸುಸಂಸ್ಕೃತಿ, ಸಮೃದ್ಧಿ ದೇಶವೆಂಬುದನ್ನೂ, ವಿಶ್ವಶಾಂತಿಯನ್ನು ಸ್ಥಾಪಿಸುವ ಏಕೈಕ ಶಕ್ತಿಯೆಂಬುದನ್ನೂ, ಸತ್ವವೆಂಬುದನ್ನೂ ವಿಶ್ವಕ್ಕೆ ಮನಗಾಣಿಸಿ ಕೊಡಬೇಕು.

* * *

ಉಪನ್ಯಾಸ ಗ್ರಂಥಮಾಲೆಯ ಇತ್ತೀಚಿನ

ಪ್ರಕಟನೆಗಳು

ಭಾರತದ ವಾಣಿಜ್ಯಾಭಿವೃದ್ಧಿ	—ಸಿ. ಎಂ. ಕೊಟ್ಟೂರಸೆಟ್ಟಿ
ಕಥನ ಕುಶಲ ಕವಿ: ಲಕ್ಷ್ಮೀಶ	—ವ್ಹಿ. ಡಿ. ಬೇಂದ್ರೆ
ಮಾತು	—ಜಿ. ಕೃಷ್ಣರಾವ
ಶಿಕ್ಷಣವೇತ್ತ ಡಾ. ಜಾನ್‌ಡ್ಯೂಯಿ	—ಟಿ. ಕೆ. ಹಿರೇಗಂಗೆ
ನಮ್ಮ ಅರಣ್ಯಗಳು	—ಟಿ. ಎಂ. ಪಂಡಿತ
ಹರಿಜನೋದ್ಧಾರ ಕಾರ್ಯ	—ಎನ್. ಕೆ. ಕಡೆತೋಟದ
ಬದಲಾಗುತ್ತಿರುವ ಭಾರತೀಯ ಕುಟುಂಬ	—ಎಚ್. ವ್ಹಿ. ನಾಗೇಶ
ಷಡಕ್ಷರದೇವ ಕವಿಯ ರಾಜಶೇಖರ ವಿಳಾಸ	—ಎಂ. ಎನ್. ವಾಲಿ
ಆಯುರ್ವೇದ ಆಹಾರ ವಿಜ್ಞಾನ	—ಎಸ್. ರಾಘವೇಂದ್ರ
ಟೆಲಿವ್ಹಿಜನ್	—ಎಂ. ಎಸ್. ಕೊಟ್ಲಿ

ವ್ಯಾಸಂಗವಿಸ್ತರಣ — ಪ್ರಕಟನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩